ಪುಟಾಣಿಗಳ ಸಂಪುಟ

ಧೀರಸನ್ಯಾಸಿ ಆನಂದತೀರ್ಥರು

ಡಾ|| ಬನ್ನಂಜೆ ಗೋವಿಂದಾಚಾರ್ಯ

೨೦೧೮-೧೯

DHĪRASANNYĀSI ĀNANDATĪRTHARU [In Kannaḍa]

A life-sketch of Śrī Madhvācārya, with pictures, specially compiled for children, by **Dr. Bannañje Govindācārya.**

Published By : Īśāvāsya-Pratiṣṭhāna [R]
Uḍupi-Beṅgaḷūru

Regd. Office : Īśāvāsyam, Ambalapāḍi,
Uḍupi- 576103
(Ph: 0820-2521047)

First Edition : Īśāvāsya-Pratiṣṭhāna,
1000 Copies (2016, July)

Pages : 62

Price : ₹ 100/-

Cover Page Art & Inner Artwork : Ujjvala Nīlamaṇi, Ukraine

Cover Page Design : Śeṣagiri K M & Mañjulā Kumārasvāmi

Computer Typeset : Badarīnārāyaṇācārya Kaḍḍi

Printed By : Rajprakash Prints,
Chamarajapet, Bengaluru- 560018



ಗುರುಬಾದರಾಯಣರಿಗೆ ಗೀತಾಭಾಷ್ಯದ ಅರ್ಪಣೆ

ಮಧ್ವಚರಿತ ಓದುವ ಮೊದಲು

ಈ ಪುಸ್ತಕ ಮುಖ್ಯವಾಗಿ ನಮ್ಮ ಪುಟಾಣಿಗಳಿಗಾಗಿ. ಈಶಾವಾಸ್ಯ ಪ್ರತಿಷ್ಠಾನದ ಕೊಡುಗೆ ಈ ಪುಟಾಣಿ ಸಂಪುಟ. ಏಳುನೂರು ವರ್ಷಗಳ ಹಿಂದೆ ಕನ್ನಡದ ತುಳುನಾಡಿನಲ್ಲಿ ಜನಿಸಿ, ವಿಶ್ವದೆತ್ತರಕ್ಕೆ ಬೆಳೆದು ನಿಂತ ಒಬ್ಬ ಧೀರಸನ್ಯಾಸಿಯ ಬಗೆಗೆ ನಮ್ಮ ಮಕ್ಕಳೂ ತಿಳಿದಿರಬೇಕು ಎನ್ನುವುದಕ್ಕಾಗಿ ಈ ಪ್ರಯತ್ನ. ತಪ್ಪು ತಿಳಿದುಕೊಂಡು ತಲೆಕೆಡಿಸಿಕೊಂಡ ದೊಡ್ಡವರಿಗೂ ಇಲ್ಲಿ ಸಾಕಷ್ಟು ಆಹಾರವಿದೆ.

ನಮ್ಮಲ್ಲಿ ಇತಿಹಾಸಕ್ಕಿಂತ ಕಟ್ಟುಕತೆಗಳಿಗೇ ಬೆಲೆ ಹೆಚ್ಚು. ಅಂಥಲ್ಲಿ ಶುದ್ಧ ಇತಿಹಾಸವನ್ನು ಹೆಕ್ಕಿ ತೆಗೆಯುವ ಪ್ರಯತ್ನ ಇಲ್ಲಿದೆ.

ಮೊದಲು ಭಾರತ-ಭಾರತೀಪ್ರಕಾಶನದವರು ಈ ಪ್ರಯತ್ನ ಮಾಡಿದ್ದರು. ಅವರ ಮಕ್ಕಳ ಮಾಲಿಕೆ ತುಂಬ ಜನಪ್ರಿಯವಾಯಿತು. ಅವರಿಗಾಗಿ ಪುಟ್ಟ ಮಧ್ವಚರಿತವನ್ನು ಬರೆದುಕೊಟ್ಟಿದ್ದೆ. 1976ರಲ್ಲಿ ಪ್ರಕಟಗೊಂಡ ಆ ಪ್ರಕಾಶನವೇ ನಮ್ಮ ಈ ಪುಟಾಣಿ-ಸಂಪುಟಕ್ಕೆ ಮೂಲಸ್ಫೂರ್ತಿ. ಈ ಸಂದರ್ಭದಲ್ಲಿ ಅವರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಿದ್ದೇನೆ.

ಈ ಮೂಲಕೃತಿಯೇ ಇನ್ನಷ್ಟು ವಿವರಗಳೊಡನೆ ಮತ್ತು ಮಕ್ಕಳಿಗೆ ಇಷ್ಟವಾಗುವಂಥ ದೊಡ್ಡ ಚಿತ್ರಗಳೊಡನೆ ಇನ್ನಷ್ಟು ಪರಿಷ್ಕಾರವಾಗಿ ಪ್ರಕಟಗೊಳ್ಳಬೇಕು ಎಂಬ ಆಸೆ ಅಂಕುರಿಸಿತು. ಹಲವಾರು ಕಾರಣಗಳಿಂದ ಆಸೆ ಆಸೆಯಾಗಿಯೇ ಉಳಿಯಿತು. ವರುಷಗಳೇ ಸಂದವು. ಕೊನೆಗೊಮ್ಮೆ ಆಚಾರ್ಯಮಧ್ವರು ಕಣ್ಣು ತೆರೆದರು. ಪುಸ್ತಕ ಅಚ್ಚಿನ ಮನೆ ಸೇರಿತು.

ಪುಸ್ತಕದ ಚಿತ್ರಗಳಿಗಾಗಿ ಮಹಾನ್ ಕಲಾವಿದನೊಬ್ಬನನ್ನು ಆಚಾರ್ಯ ಮಧ್ವರೇ ಕಳುಹಿಸಿಕೊಟ್ಟರು. ಅಂತಾರಾಷ್ಟ್ರೀಯ ಮಹಾನ್ ಕಲಾವಿದ, ರಶಿಯಾ ದೇಶದ ಉಕ್ರಯೀನ (Ukraine) ಪ್ರಾಂತದ ಉಜ್ಜ್ವಲ ನೀಲಮಣಿ ಎಂಬವರು ಆಚಾರ್ಯಮಧ್ವರ ಸಿದ್ಧಾಂತವನ್ನು ಕಲಿಯಲೆಂದು ಭಾರತಕ್ಕೆ ಬಂದು ನನ್ನ ಶಿಷ್ಯಕೋಟಿಯಲ್ಲಿ ಸೇರಿಕೊಂಡರು. ಅವರು ತುಂಬ ಪ್ರೀತಿಯಿಂದ, ಕಣ್ಮನ ತುಂಬುವ ಮುದ್ದಾದ ಚಿತ್ರಗಳನ್ನು ರಚಿಸಿ ಗುರುಕಾಣಿಕೆ ಎಂದು ನನಗೊಪ್ಪಿಸಿದರು. ಆಚಾರ್ಯಮಧ್ವರ ಕೈವಾಡ ನಮ್ಮೆಣಿಕೆಗೆ ಎಟುಕದ್ದು. ಉಜ್ಜ್ವಲ ನೀಲಮಣಿಗೆ ನನ್ನ ಆಶೀರ್ವಾದಗಳು ಮತ್ತು ಪ್ರೀತಿ ತುಂಬಿದ ಅಭಿನಂದನೆಗಳು.

ಎಂದಿನಂತೆ ಶ್ರದ್ಧೆಯಿಂದ ಗಣಕಯಂತ್ರದ ಮೂಲಕ ಲಿಪಿ ಸಂಯೋಜನೆ ಮಾಡಿದ ಶ್ರೀ ಕಡ್ಡಿ ಬದರಿನಾರಾಯಣಾಚಾರ್ಯ, ಅವರಿಗೆ ಸಹಕರಿಸಿದ ಶ್ರೀ ದಿಲೀಪ ಎಸ್., ಪುಟಗಳಿಗೆ ಚಂದದ ಚೌಕಟ್ಟು ಹಾಕಿ ಪುಸ್ತಕಕ್ಕೆ ಹೊಸ ಕಳೆ ಕೊಟ್ಟ ಶ್ರೀಮತಿ ಮಂಜುಳಾ ಕುಮಾರಸ್ವಾಮಿ ಮತ್ತು ಮುದ್ದಾಗಿ ಮುದ್ರಿಸಿದ, ರಾಜಪ್ರಕಾಶ್ ಪ್ರಿಂಟ್ಸ್‌ನ ಶ್ರೀಪ್ರಕಾಶ್- ಇವರೆಲ್ಲರಿಗೂ ನನ್ನ ಅಭಿನಂದನೆಗಳು.

ಕನ್ನಡದ ಕಂದರು ಕೊಂಡು ಓದಿ ಪ್ರೋತ್ಸಾಹಿಸಿದರೆ ಉಜ್ಜ್ವಲ ನೀಲಮಣಿಯ ಇನ್ನಷ್ಟು ರೇಖಾಚಿತ್ರ-ವರ್ಣಚಿತ್ರಗಳೊಡನೆ ಇನ್ನಷ್ಟು ಆಕರ್ಷಕವಾಗಿ ಇದನ್ನು ಪ್ರಕಟಿಸಬೇಕೆಂಬ ಆಸೆಯಿದೆ. ನಮ್ಮ ಪುಟಾಣಿಗಳಿಗೆ ಇದೊಂದು ಪುಟ್ಟ ಕಾಣಿಕೆ.

ಉಡುಪಿ
ದುರ್ಮುಖ ಸಂವತ್
ಆಷಾಢ ಶುದ್ಧ ನವಮಿ
13, ಜುಲೈ, 2016

ಪ್ರಕಾಶನದ ಪರವಾಗಿ
ಡಾ|| ಬನ್ನಂಜೆ ಗೋವಿಂದಾಚಾರ್ಯ

ಧೀರಸನ್ಯಾಸಿ ಆನಂದತೀರ್ಥರು

ಕನ್ನಡನಾಡಿನಲ್ಲಿ, ಉಡುಪಿಯಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪನೆ ಮಾಡಿದ ಮಹಾಪುರುಷರು. ಇವರು ಬೋಧಿಸಿದ ಸಿದ್ಧಾಂತವನ್ನು ಹಿಂದೆ ತತ್ವವಾದ ಎಂದು ಕರೆಯುತ್ತಿದ್ದರು. ಈಗ ದ್ವೈತವಾದ ಎಂದು ಕರೆಯುತ್ತಾರೆ. ಏಳು ಶತಮಾನಗಳ ಹಿಂದೆ 'ಯಾವ ಹೆಸರಿನಿಂದ ಕರೆದರೂ ಓಗೊಡುವ ದೇವರು ಒಬ್ಬನೇ' ಎಂದು ಮುಸ್ಲಿಂ ದೊರೆಗೆ ಹೇಳಿದ ಧೀಮಂತರು. ಹುಟ್ಟಿನಿಂದ ಜಾತಿ ತೀರ್ಮಾನವಾಗುವುದಿಲ್ಲ, ಸ್ವಭಾವದಿಂದ, ಯೋಗ್ಯತೆಯಿಂದ ತೀರ್ಮಾನವಾಗುತ್ತದೆ ಎಂದು ಸಾರಿದವರು. ಅಗಾಧ ವಿದ್ವತ್ತು, ಧೀರವ್ಯಕ್ತಿತ್ವದ ಮಹಾನ್ ವೀರಸನ್ಯಾಸಿ ಆಚಾರ್ಯಮಧ್ವರು. ಇವರೇ ಭಗವತ್ಪಾದ ಆನಂದತೀರ್ಥರು.

ಗಂಗೆಯನ್ನು ದಾಟಿದ ಧೀರಸನ್ಯಾಸಿ

ಏಳು ಶತಕಗಳ ಹಿಂದಿನ ಮಾತು. ಆಗಲೇ ಉತ್ತರದ ಹಲವೆಡೆ ಇಸ್ಲಾಂ ಧರ್ಮ ಪಾದಾರ್ಪಣ ಮಾಡಿತ್ತು.

ಒಮ್ಮೆ ಹೀಗೆ ನಡೆಯಿತು: ಗಂಗೆಯ ತೀರ. ಆಚೆಯ ತಡಿಯಲ್ಲಿ ಮುಸ್ಲಿಂ ದೊರೆಯೊಬ್ಬನ (ಈತ ಜಲಾಲುದ್ದೀನ್ ಖಿಲ್ಜಿ ಇರಬೇಕು ಎಂದು ವಿದ್ವಾಂಸರ ಅಭಿಪ್ರಾಯ) ರಾಜ್ಯ. ನದಿಯ ಗುಂಟ ಸೈನಿಕರ ಭದ್ರ ಕಾವಲು. ದಾಟಲು ದೋಣಿಯ ವ್ಯವಸ್ಥೆಯೂ ಇಲ್ಲ, ಎಲ್ಲಿ ನೆರೆಯ ಹಿಂದೂರಾಜನ ಗೂಢಚರರು ಬಂದು ಬಿಡುತ್ತಾರೋ ಎನ್ನುವ ಭಯ!





ಈಚೆಯ ತಡಿಯಲ್ಲಿ ಧೀರ ಸನ್ನ್ಯಾಸಿಯೊಬ್ಬರು ಶಿಷ್ಯಪರಿವಾರ ದೊಡನೆ ನಿಂತಿದ್ದಾರೆ. ಮುಂದೆ ಸಾಗುವ ಬಗೆ ಹೇಗೆ? ಶಿಷ್ಯರಿಗೆ ಚಿಂತೆ.

ಶಿಷ್ಯರ ಕಳವಳ ಗುರುವಿಗೆ ಅರಿವಾಯಿತು. ಅವರು ತನ್ನ ವ್ಯಕ್ತಿತ್ವ ದಷ್ಟೆ ಗಂಭೀರವಾದ ದನಿಯಿಂದ ನುಡಿದರು: 'ಹೆದರಬೇಡಿ, ನಾವು ಸಂಸಾರದ ನದಿಯನ್ನೆ ದಾಟಿಸಬಂದವರು. ಗಂಗೆಯನ್ನು ದಾಟಿಸಲಾರೆವು ಎಂದು ತಿಳಿದಿರಾ? ನನ್ನ ಬೆನ್ನ ಹಿಂದೆಯೆ ನೀರಿಗಿಳಿದು ಧೈರ್ಯವಾಗಿ ನಡೆದು ಬನ್ನಿ.'

ಶತ್ರು ಸೈನಿಕರ ಮುಖಂಡ ಆಜ್ಞಾಪಿಸಿದ: 'ಇವರು ನಮ್ಮ ಶತ್ರು ರಾಜನ ಗೂಢಚರರಿರಬೇಕು. ಅದಕ್ಕೆಂದೆ ಈ ಮೋಸದ ಬೈರಾಗಿಯ ವೇಷ. ಇವರನ್ನು ಬರಗೊಡಬೇಡಿ. ದಡ ಸೇರುವ ಮುನ್ನ ಈ ಬೈರಾಗಿ ಗಳ ಕಥೆ ಮುಗಿಸಿಬಿಡಿ.'

ನೀರಿನಲ್ಲಿ ನಡೆದುಬರುತ್ತಿದ್ದ ಸನ್ನ್ಯಾಸಿ ಸೈನಿಕರ ಈ ಕೋಪಾಟೋಪ ವನ್ನು ಕಂಡರು. ಕಂಡು ಕನಿಕರದಿಂದ ಹೀಗೆ ಕೂಗಿ ಹೇಳಿದರು: 'ಸುಮ್ಮನೆ ದುಡುಕಿ ನೀರಿಗೆ ಬಿದ್ದು ಸಾಯಬೇಡಿ. ಹೇಳಿಕೇಳಿ ನಾವಿರುವುದು ಬೆರಳೆಣಿಕೆಯ ಮಂದಿ. ನಿಮಗೇಕೆ ನಮ್ಮಿಂದ ಭಯ? ನಾವು ನಿಮ್ಮ ದೊರೆಯನ್ನು ಕಾಣಲೆಂದೇ ಬಂದವರು. ಜಗಳಾಡಲೆಂದು ಬಂದವರಲ್ಲ.'

ಈ ಧೀರವಾಣಿಗೆ ಸೈನಿಕರು ಬೆರಗಾದರು. ತಮ್ಮ ಕರ್ತವ್ಯವನ್ನು ಮರೆತು ಮರವಟ್ಟು ನಿಂತುಬಿಟ್ಟರು. ಅವರು ನೋಡುತ್ತಿದ್ದಂತೆಯೇ ಈ ಧೀರಸನ್ನ್ಯಾಸಿ ಶಿಷ್ಯರನ್ನು ಸಾವಿನ ಭಯದಿಂದ ಮತ್ತು ಗಂಗೆಯ ಪ್ರವಾಹದಿಂದ ಪಾರುಗಾಣಿಸಿ ಮುನ್ನಡೆದರು. ನೂರಾರು ಸೈನಿಕರು ಇವರ ಸುತ್ತ ಕತ್ತಿ ಹಿರಿದು ನಡೆದು ಬಂದರು.

'ನಿನ್ನ ದೇವರೇ ನನ್ನ ದೇವರು'

ರಾಜಬೀದಿಯಲ್ಲಿ ನಡೆದು ಬರುತ್ತಿರುವ ಈ ದಿಟ್ಟ ಸನ್ನ್ಯಾಸಿ ಯನ್ನು, ಶಿಷ್ಯಪರಿವಾರವನ್ನು, ಸುತ್ತುವರಿದಿರುವ ತನ್ನ ಸೈನಿಕರನ್ನು



ನಿನ್ನ ಅಲ್ಲಾ ನನ್ನ ದೇವರು ಕೂಡ

ಅರಮನೆಯ ಮಹಡಿಯ ಮೇಲೆ ನಿಂತ ದೊರೆ ಕಂಡ. ಕಂಡು ಅಚ್ಚರಿಗೊಂಡ. ಸೈನಿಕರ ಕಾವಲನ್ನು ಮೀರಿ ರಾಜ್ಯದ ಗಡಿಯೊಳಗೆ ಪ್ರವೇಶಿಸುವುದು ಈ ಹಿಂದೂಬೈರಾಗಿಗೆ ಹೇಗೆ ಸಾಧ್ಯವಾಯಿತು? ಅವನು ಅಟ್ಟದ ಮೇಲೆಯೆ ನಿಂತು ಸನ್ಯಾಸಿಯನ್ನು ಕುರಿತು ನುಡಿದ–

'ನೆರೆಯ ಶತ್ರುರಾಜನ ಗೂಢಚರರು ಇತ್ತ ಸುಳಿಯದಂತೆ ನಾನು ನದಿಯ ಗುಂಟ ಸೈನಿಕರನ್ನಿಟ್ಟಿದ್ದೇನೆ. ಅವರ ಕೈಯಿಂದ ತಪ್ಪಿಸಿಕೊಂಡು ಜೀವ ಉಳಿಸಿಕೊಂಡು ಯಾವೊಬ್ಬನೂ ಈ ತನಕ ಇತ್ತ ಬಂದುದಿಲ್ಲ. ಆದರೆ ಓ ಬೈರಾಗಿ, ನೀನು ಹೇಗೆ ಅವರಿಂದ ಪಾರಾಗಿ ಬಂದೆ? ದೋಣಿಯಿಲ್ಲದೆ ನದಿಯನ್ನು ದಾಟುವುದು ಹೇಗೆ ಸಾಧ್ಯವಾಯಿತು? ಇತ್ತ ಬಂದ ಉದ್ದೇಶವಾದರೂ ಏನು?'

ಸನ್ಯಾಸಿ ನಗುತ್ತ, ಸೂರ್ಯನತ್ತ ಬೆರಳು ತೋರಿಸಿ ದೊರೆಯ ಆಡು ಭಾಷೆಯಲ್ಲೇ (ಪರ್ಷಿಯನ್) ಉತ್ತರಿಸಿದರು: 'ನಿನ್ನ, ನನ್ನ, ನಮ್ಮೆಲ್ಲರ ದೇವರು– ಜಗತ್ತನ್ನೆ ಬೆಳಗುವ ಭಗವಂತ ಅಲ್ಲಿದ್ದಾನೆ. ನಿನಗೆ ಅವನು ಅಲ್ಲಾ, ನನಗೆ ನಾರಾಯಣ. ಯಾವ ಹೆಸರಿನಿಂದ ಕರೆದರೂ ಓಗೊಡುವ ದೇವರು ಒಬ್ಬನೇ. ತಲೆಗೊಬ್ಬ ದೇವರಿಲ್ಲ, ನೀನು, ನಾನು, ನಾವೆಲ್ಲ ಅವನ ರಾಜ್ಯದ ಪ್ರಜೆಗಳು. ಅವನ ಅನುಗ್ರಹದಿಂದಲೇ ನಾವು ದೋಣಿ ಇಲ್ಲದೆ ನದಿಯನ್ನು ದಾಟಿದೆವು; ಕೊಲ್ಲ ಬಂದ ನಿನ್ನ ಸೈನಿಕರ ಮನವೊಲಿಸಿ ಇತ್ತ ಬಂದೆವು. ಇದೆಲ್ಲ ಅವನ ಕರುಣೆ. ನಾವು ನಿನ್ನ ರಾಜ್ಯದ ಮಾರ್ಗವಾಗಿ ಉತ್ತರಕ್ಕೆ ಹೊರಟವರು....'

ಎಂಥ ವಿಸ್ಮಯ! 'ಈಶ್ವರ್ ಅಲ್ಲಾ ತೇರೇ ನಾಮ್' ಎನ್ನುವ ಮಾತನ್ನು ಈ ವೀರಸನ್ಯಾಸಿ ಅಂದೇ ಸಾರಿಬಿಟ್ಟಿದ್ದರು!

ಆ ಗಾಂಭೀರ್ಯ, ಎದೆಗಾರಿಕೆ, ಆತ್ಮಶಕ್ತಿ, ಆ ದಿವ್ಯತೇಜಸ್ಸು ಇದನ್ನೆಲ್ಲ ಕಂಡು, ಆ ಮೋಡಿಯ ಮಾತುಗಳನ್ನು ಕೇಳಿ ಮುಸ್ಲಿಂ ದೊರೆ

ಬೆರಗಾದ. ಅಟ್ಟದಿಂದ ಇಳಿದು ಬಂದು ಸನ್ಯಾಸಿಯನ್ನು ರಾಜಸಭೆಗೆ ಕರೆಸಿದ. ಪರಿಪರಿಯಾಗಿ ಸತ್ಕರಿಸಿದ. 'ನನ್ನ ರಾಜ್ಯದಲ್ಲೇ ಬಹುದೊಡ್ಡ ಜಹಗೀರನ್ನು ಕೊಡುಗೆಯಾಗಿ ನೀಡುತ್ತೇನೆ. ಇಲ್ಲೆ ಆಶ್ರಮ ಕಟ್ಟಿಕೊಂಡು ಇದ್ದು ಬಿಡಿ', ಎಂದು ಬಿನ್ನವಿಸಿಕೊಂಡ.

ಈ ಧೀರಸನ್ಯಾಸಿ ರಾಜನ ಈ ಕೊಡುಗೆಯನ್ನು ಸೌಜನ್ಯದಿಂದಲೆ ಬೇಡವೆಂದರು. ಶಿಷ್ಯಪರಿವಾರದೊಡನೆ ಉತ್ತರಾಭಿಮುಖವಾಗಿ ಬದರಿ ಯತ್ತ ಹೊರಟೇ ಬಿಟ್ಟರು.

ಯಾರಿವರು?

ಯಾರಿವರು? ಇವರೇ ಆಚಾರ್ಯಮಧ್ವರು. ಯಾವ ಭಾಷೆ ಯಲ್ಲಿ, ಯಾವ ಹೆಸರಿನಲ್ಲಿ ಕರೆದರೂ ಭಗವಂತನಿಗೆ ಕೇಳಿಸುತ್ತದೆ ಎಂದು ಜಗತ್ತಿನ ಮುಂದೆ ಘೋಷಿಸಿದ ಭಾರತೀಯ ಪ್ರವಾದಿ. ಮುಂದಿನ ಜನಾಂಗಕ್ಕಾಗಿ ಅವರು ಒಂದು ಮಹಾನ್ ಸಂದೇಶವನ್ನು ಸಾರಿದರು:

'ದೇವರನ್ನು ಹೇಗೆ ಕರೆಯಲಿ ಎಂದು ಗೊಂದಲಗೆಡಬೇಡಿ. ಯಾವ ಭಾಷೆಯ ಯಾವ ಹೆಸರಿನಿಂದಲೂ ಅವನನ್ನು ಕರೆಯ ಬಹುದು. ಏಕೆಂದರೆ ಅವನ ಹೆಸರಲ್ಲದ ಯಾವ ನುಡಿಯೂ ಈ ಜಗತ್ತಿನಲ್ಲಿಲ್ಲ. ನಮ್ಮ ಆಡುಮಾತಷ್ಟೆ ಅಲ್ಲ- ಇಡಿಯ ಪ್ರಕೃತಿಯೇ ಭಗವಂತನ ಗುಣಗಾನಕ್ಕೆ ಶ್ರುತಿ ಹಿಡಿದಿದೆ. ಸಮುದ್ರದ ಮೊರೆತ, ಗಾಳಿಯ ಸುಯಿಲು, ಹಕ್ಕಿಗಳ ಚಿಲಿಪಿಲಿ, ಪ್ರಾಣಿಗಳ ಕೂಗು- ಜಗತ್ತಿನ ಎಲ್ಲ ನಾದವೂ ಭಗವಂತನ ಗುಣಗಾನ. ಎಲ್ಲ ನಾದದಲ್ಲಿ ಭಗವಂತನ ಹಿರಿಮೆಯನ್ನು, ಎಲ್ಲಡೆಯಲ್ಲೂ ಭಗವಂತನ ಇರವನ್ನು ಕಾಣಲು ಕಲಿಯಿರಿ; ಸದಾ ಭಗವನ್ಮಯವಾಗಿ ಬಾಳಿರಿ.'

ಭಗವದ್ಗೀತೆಗೆ ಅವರು ರಚಿಸಿದ ಟೀಕೆಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿ ಹೀಗೆ ಸಾರಿದರು: 'ಹುಟ್ಟಿನಿಂದ ಜಾತಿ, ಸ್ವಭಾವದಿಂದ

ವರ್ಣ. ಹುಟ್ಟಿನಿಂದ ಒಬ್ಬನು ಯಾವ ಜಾತಿ ಎನ್ನುವುದು ಮುಖ್ಯವಲ್ಲ ಅವನ ಸ್ವಭಾವವೆ ಅವನ ವ್ಯಕ್ತಿತ್ವದ ನಿರ್ಣಾಯಕ. ಅಧ್ಯಾತ್ಮದಲ್ಲಿ ಜಾತಿ ಮುಖ್ಯವಲ್ಲ. ವರ್ಣ ಮುಖ್ಯವಾಗುತ್ತದೆ. ವರ್ಣಪದ್ಧತಿ ಎನ್ನುವುದು ಮನುಷ್ಯನ ಸ್ವಭಾವದ ವಿಭಾಗ. ಅಧ್ಯಾತ್ಮದ ಗಂಧಗಾಳಿಯೂ ಇಲ್ಲದ ವೇಷಮಾತ್ರ ಬ್ರಾಹ್ಮಣನಿಗಿಂತ ಅಧ್ಯಾತ್ಮದ ದಾರಿ ತುಳಿದ ಚಂಡಾಲನೂ ಮೇಲು.' ಇದನ್ನೆ ಭಗವಂತ ಗೀತೆಯಲ್ಲಿ ಸಾರಿದ್ದು: '**ಗುಣಕರ್ಮ-ವಿಭಾಗಶಃ**' ಎಂದು.

ಜಾತಿ-ಮತ ಪದ್ಧತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಹದಿಮೂರನೆಯ ಶತಕದ ಸಂಪ್ರದಾಯಬದ್ಧ ಭಾರತದಲ್ಲಿ ಬದುಕಿದ್ದ ಆಚಾರ್ಯರು ಇಂಥ ಪ್ರಗತಿಶೀಲ ವಿಚಾರಗಳನ್ನು ಮಂಡಿಸಿದ್ದರು ಎನ್ನುವುದು ಅವರ ದೂರದೃಷ್ಟಿಗೊಂದು ಸಾಕ್ಷಿ. ಪುರೋಗಾಮಿಗಳೆನ್ನುವ ಬುದ್ಧಿಜೀವಿಗಳು ಇದನ್ನು ಗಮನಿಸಬೇಕು.

ಮಣ್ಣು ಪಡೆದ ಪುಣ್ಯ

ಭಾರತದ ಆಚಾರ್ಯಪುರುಷರ ಮಾಲಿಕೆಯಲ್ಲಿ ಮೂವರು ಹೆಚ್ಚು ಪ್ರಖ್ಯಾತರಾದವರು: ಅದ್ವೈತಮತ(ಮಾಯಾವಾದ)ದ ಸ್ಥಾಪಕರಾದ ಆಚಾರ್ಯಶಂಕರರು, ವಿಶಿಷ್ಟಾದ್ವೈತಮತದ ಸ್ಥಾಪಕರಾದ ಆಚಾರ್ಯರಾಮಾನುಜರು ಮತ್ತು ದ್ವೈತಮತ(ತತ್ವವಾದ)ದ ಸ್ಥಾಪಕರಾದ ಆಚಾರ್ಯಮಧ್ವರು. 'ಈ ವಿಶ್ವ ಬರಿಯ ಮಾಯೆ; ಭಗವಂತನೊಬ್ಬನೆ ಸತ್ಯ' ಎಂದರು ಆಚಾರ್ಯಶಂಕರರು. 'ವಿಶ್ವಾತ್ಮನಾದ ಭಗವಂತನಿಗೆ ಈ ವಿಶ್ವವೆ ಶರೀರವಿದ್ದಂತೆ; ಅದರಿಂದ ಇದು ಸತ್ಯ' ಎಂದರು ಆಚಾರ್ಯರಾಮಾನುಜರು. 'ಈ ಜಗತ್ತು ಭಗವಂತನ ಲೀಲಾಸೃಷ್ಟಿ. ಇದನ್ನು ಅಪಲಾಪ ಮಾಡಿ ಅವನ ಮಹಿಮೆಗೆ ಅಪಚಾರ ಮಾಡಬೇಡಿ', ಎಂದರು ಆಚಾರ್ಯಮಧ್ವರು.

ತತ್ವವಾದದ ಆಚಾರ್ಯರು

ಪ್ರಾಚೀನ ಗ್ರಂಥಗಳಲ್ಲಿ ಆಚಾರ್ಯಮಧ್ವರ ಸಿದ್ಧಾಂತವನ್ನು ದ್ವೈತ ವಾದ ಎನ್ನುವ ಬದಲು ತತ್ವವಾದ ಎಂದೇ ಕರೆದಿದ್ದಾರೆ. 'ಈ ಜಗತ್ತು ಕನಸಿನ ಮಾಯೆಯಲ್ಲ, ಭಗವಂತ ಜಾದೂಗಾರ ಅಲ್ಲ, ಅವನು ಸತ್ಯಕರ್ಮ. ಇದು ಭಗವಂತನ ಸತ್ಯಸೃಷ್ಟಿ, ಅದರಿಂದ ಇದೂ ಒಂದು ಸತ್ಯತತ್ವ, ಭಗವಂತನ ಮಹಿಮೆಯನ್ನರಿಯುವ ಶಿಕ್ಷಣ ಶಾಲೆ', ಎನ್ನುವ ವಾದವನ್ನು ಮಂಡಿಸಿದ್ದರಿಂದ ಆಚಾರ್ಯಮಧ್ವರ ಸಿದ್ಧಾಂತಕ್ಕೆ ತತ್ವವಾದ ಎಂದು ಹೆಸರಾಯಿತು.

ಇಂಥ ಒಬ್ಬ ಮಹಾದಾರ್ಶನಿಕನನ್ನು ಜಗತ್ತಿಗೆ ನೀಡಿದ ಕೀರ್ತಿ ನಮ್ಮ ಕರ್ನಾಟಕಕ್ಕೆ ಸಲ್ಲಬೇಕು.

ತುಳುನಾಡಿನ ಹೆಮ್ಮೆಯ ಕೂಸು

ಆಚಾರ್ಯಮಧ್ವರು ಅಚ್ಚ ಕನ್ನಡಿಗರು. ಅದಕ್ಕಿಂತ ಹೆಚ್ಚು ತೌಳ ವರು. ಕನ್ನಡನಾಡಿನ ಪಡುಕಡಲ ತೀರದ ಉಡುಪಿಯ ಸಮೀಪದ ಪುಟ್ಟ ಹಳ್ಳಿ ಪಾಜಕ ಆಚಾರ್ಯರ ಜನ್ಮಭೂಮಿ. ಪಾಜಕ ಪ್ರಾಕೃತಿಕವಾಗಿ ತುಂಬ ಸುಂದರವಾದ ಹಳ್ಳಿ. ಅಕ್ಕಪಕ್ಕದಲ್ಲಿ ಎರಡು ಪುಟ್ಟ ಬೆಟ್ಟಗಳು. ಒಂದರ ತುದಿಯಲ್ಲಿ ತಾಯಿ ದುರ್ಗೆಯ ಪ್ರಾಚೀನ ಗುಡಿ. ಇನ್ನೊಂದು ಬದಿಯ ಬಂಡೆಬೆಟ್ಟದಲ್ಲಿ ಪರಶುರಾಮನ ಗುಡಿ. ಎರಡು ಬೆಟ್ಟಗಳ ಬುಡದಲ್ಲಿ ಸಸ್ಯಶ್ಯಾಮಲವಾದ ಪುಟ್ಟಹಳ್ಳಿ ಪಾಜಕ.

ಈ ನೆಲದ ಮಣ್ಣು ಆಚಾರ್ಯರ ಪಾದಸ್ಪರ್ಶದಿಂದ ಪಾವನ ವಾಗಿದೆ; ಈ ನೆಲದ ಒಂದೊಂದು ಕಲ್ಲೂ ಆಚಾರ್ಯರ ಬಾಲ ಲೀಲೆಯ ನೂರಾರು ಕಥೆಗಳನ್ನು ಹೊತ್ತು ಮೂಕವಾಗಿ ನಿಂತಿದೆ.

ಭುವಿಗಿಳಿದು ಬಂದ ಮುದ್ದುಮಗು

ಆಚಾರ್ಯಮಧ್ವರ ತಂದೆ ನಡಿಲ್ಲಾಯ ನಾರಾಯಣಭಟ್ಟ (ತೌಳವ ಮನೆತನದಲ್ಲಿ ಖ್ಯಾತರಾದವರು ನಡಿಲ್ಲಾಯರು; ನಡುಮನೆಯವರು. ಸಂಸ್ಕೃತದಲ್ಲಿ ಮಧ್ಯಗೇಹಭಟ್ಟರು). ತಾಯಿಯ ಹೆಸರು ವೇದವತಿ ಎಂದು ಕೆಲವರು ಹೇಳುತ್ತಾರೆ. (ಇದಕ್ಕೆ ಖಚಿತವಾದ ಆಧಾರವಿಲ್ಲ, ಇನ್ನು ಕೆಲವಿದ್ವಾಂಸರ ಅಭಿಪ್ರಾಯದಂತೆ ಆಕೆಯ ಹೆಸರು ಸತ್ಯವತಿ. ಇದು ವೇದವ್ಯಾಸರ ತಾಯಿಯ ಹೆಸರು ಕೂಡ. ಇದೇ ಆಚಾರ್ಯಮಧ್ವರ ತಾಯಿಯ ಹೆಸರೂ ಆಗಿತ್ತು ಎನ್ನುವುದು ಹೆಚ್ಚು ಸಮರ್ಪಕ.) ಮನೆ ಬೆಳಗುವ ಮಗನೊಬ್ಬ ಬೇಕು ಎಂದು ಈ ದಂಪತಿಗಳು ಬಹುಕಾಲ ಹಂಬಲಿಸಿದರು; ಕಠಿಣವ್ರತಗಳಿಂದ ಮಹಾದೇವರ ಗುಡಿಯಲ್ಲಿ (ಈಗಣ ಅನಂತೇಶ್ವರನ ದೇವಾಲಯದಲ್ಲಿ) ಭುಜಂಗಶಯನನಾದ ಭಗವಂತನನ್ನು ಅನನ್ಯಭಕ್ತಿಯಿಂದ ಆರಾಧಿಸಿದರು. ಕೊನೆಗೊಮ್ಮೆ ದಂಪತಿಗಳ ತಪಸ್ಸು ಫಲಿಸಿತ್ತು. ಅವರ ಮನೆಯನ್ನಷ್ಟೆ ಅಲ್ಲ, ಮನುಕುಲವನ್ನೇ ಬೆಳಗಿದ ಮಗುವೊಂದು ಹುಟ್ಟಿತು.

ಅರ್ಥವಾಗದ ಮಗು

ಕ್ರಿ.ಶ.1238, ವಿಲಂಬಿ ಸಂವತ್ಸರದ, ಆಶ್ವಯುಜ ಶುದ್ಧ ದಶಮಿ(ವಿಜಯದಶಮಿ)ಯಂದು ಮಧ್ಯಾಹ್ನಸಮಯದಲ್ಲಿ ಪಾಜಕ ಕ್ಷೇತ್ರದಲ್ಲಿ ಆಚಾರ್ಯಮಧ್ವರ ಅವತಾರವಾಯಿತು. ತಂದೆ ತಪದ ಫಲವಾಗಿ ಪಡೆದ ಮಗುವಿಗೆ 'ವಾಸುದೇವ' ಎಂದು ಹೆಸರಿಟ್ಟರು.

ದಿನದಿಂದ ದಿನಕ್ಕೆ ಮಗು ಮುದ್ದುಮುದ್ದಾಗಿ ಬೆಳೆಯಿತು. ಮಗುವನ್ನು ಕಂಡು ತಂದೆ-ತಾಯಿಗಷ್ಟೆ ಅಲ್ಲ; ಊರಿನವರಿಗೆಲ್ಲ ಸಂಭ್ರಮ.



'ಅಪ್ಪಾ! ದಾರಿಯುದ್ದಕ್ಕೂ ದೇವರು ನನ್ನ ಜತೆಗಿದ್ದ.'

ಎಲ್ಲರ ಬಾಯಲ್ಲೂ ಒಂದೇ ಮಾತು; 'ಇಂಥ ಚೆಲುವ ಮಗುವನ್ನು ಪಡೆದ ಆ ತಾಯಿ ಎಂಥ ಪುಣ್ಯವಂತೆ!' ಎಲ್ಲರೂ ಮಗುವಿನ ಹೊರ ನೋಟದ ಚೆಲುವನ್ನಷ್ಟೆ ಅರ್ಥಮಾಡಿಕೊಂಡರೇ ಹೊರತು ಒಳಗಿನ ಆಳ ವನ್ನು ಅರಿತುಕೊಳ್ಳಲೇ ಇಲ್ಲ.

ನಾಪತ್ತೆಯಾದ ಹುಡುಗ!

ಒಮ್ಮೊಮ್ಮೆ ಈ ಮಗುವಿನ ಬಾಲಲೀಲೆಗಳು ತಂದೆ-ತಾಯಿಗಳನ್ನು ದಂಗುಬಡಿಸಿಬಿಡುತ್ತಿದ್ದವು. 'ಈ ಮಗು ಎಲ್ಲರಂತಲ್ಲ', ಎಂದು ಅವರು ಪದೇಪದೇ ಅಂದುಕೊಳ್ಳುವಂತಾಗುತ್ತಿತ್ತು. ಅಂಥ ಒಂದು ಮಹತ್ವದ ಘಟನೆಯೊಂದನ್ನು ಇಲ್ಲಿ ಉದಾಹರಿಸಬಹುದು–

ವಾಸುದೇವನಿಗೆ ಆಗ ಮೂರು ವರ್ಷ ಇರಬಹುದು. ಒಮ್ಮೆ ನಡಿಲ್ಲಾಯದಂಪತಿಗಳು ಅವನನ್ನು ಕರೆದುಕೊಂಡು ನಿಡಿಯೂರಿನ (ಪ್ರಾಚೀನಗ್ರಂಥಗಳಲ್ಲಿ ಉಲ್ಲೇಖಗೊಂಡ ಹಳೆಯ ಹೆಸರು: ನಡುವೈರಿ) ತಮ್ಮ ಬಂಧುಗಳ ಮನೆಗೆ ಸಮಾರಂಭವೊಂದರಲ್ಲಿ ಪಾಲುಗೊಳ್ಳಲು ಹೋಗಿದ್ದರು. ನಿಡಿಯೂರಿನ ಮನೆಯ ಸಂಭ್ರಮದ ನಡುವೆ ಮಗು ವಾಸುದೇವ ಯಾರಿಗೂ ತಿಳಿಯದಂತೆ ಮೆಲ್ಲನೆ ಮನೆಯಿಂದ ಹೊರಟುಬಿಟ್ಟ.

ಎಷ್ಟು ಹೊತ್ತು ಕಳೆಯಿತೋ! ಯಾರೋ ಬಂಧುಗಳು, 'ನಿಮ್ಮ ಮಗು ಎಲ್ಲಿ? ನೋಡಲೇ ಇಲ್ಲವಲ್ಲ?' ಎಂದು ವಿಚಾರಿಸಿದಾಗಲೆ ತಾಯಿಗೆ ಎಚ್ಚರ. ಆದರೆ ಮನೆಯ ಸುತ್ತಮುತ್ತ ಎಲ್ಲಿ ಹುಡುಕಿದರೂ ಹುಡುಗ ನಾಪತ್ತೆ!

ಅನಂತೇಶ್ವರನ ಮುಂದೆ ಕೈಮುಗಿದು ನಿಂತ ಮಗು

ನಡಿಲ್ಲಾಯರು ಕಣ್ಣಲ್ಲಿ ನೀರು ತುಂಬಿಕೊಂಡು ತಾವು ಬಂದ ದಾರಿಗುಂಟ ಮಗುವನ್ನು ಹುಡುಕ ತೊಡಗಿದರು. ದಾರಿಯಲ್ಲಿ

ಯಾರೋ ಸಿಕ್ಕಿದವರು ಹೇಳಿದರು: 'ಪುಟ್ಟ ಮಗುವೊಂದು ಕೊಡವೂರಿನ (ಹಳೆಯ ಹೆಸರು 'ಕುಡುವೂರು') ಕಾನಂಗಿ ಶಂಕರ-ನಾರಾಯಣ ದೇವಾಲಯದ ಬಳಿ ಹೋಗುತ್ತಿದ್ದುದನ್ನು ನಾವು ಕಂಡೆವು.' ಕೊಡವೂರಿನಲ್ಲಿ ಮಗು ಕಾಣಲಿಲ್ಲ. ಉಡುಪಿಯಿಂದ ಬರುತ್ತಿದ್ದ ದಾರಿಗರು ಇನ್ನೊಂದು ಸುದ್ದಿ ತಂದರು: 'ಗದ್ದೆ-ಬಯಲುಗಳನ್ನು ದಾಟಿಕೊಂಡು ಮೂರು ವರ್ಷದ ಪುಟ್ಟ ಮಗುವೊಂದು ಬನ್ನಂಜೆಯ ಮಹಾಲಿಂಗೇಶ್ವರದೇವಾಲಯದತ್ತ ಹೋಗುತ್ತಿತ್ತು.'

ನಡಿಲ್ಲಾಯರು ಬನ್ನಂಜೆಗೆ ಧಾವಿಸಿದರು. ಬನ್ನಂಜೆಯ ಹಳೆಯ ಹೆಸರು: 'ತಾಳಿಕುಡೆ'. ಅಲ್ಲಿಯೂ ಮಗು ಕಾಣಸಲಿಲ್ಲ.

ಅಲ್ಲಿಂದ ಉಡುಪಿಗೆ ಹತ್ತು ನಿಮಿಷದ ದಾರಿ. ನಡಿಲ್ಲಾಯರು ಹುಡುಕುತ್ತ, ವಿಚಾರಿಸುತ್ತ ಉಡುಪಿಗೆ ಬಂದರು. ತಾನು ನಂಬಿದ ಅಧಿದೇವತೆಯಾದ ಅನಂತೇಶ್ವರನ ಗುಡಿಗೆ ಬಂದರು. ಓಹ್! ಎಂಥ ಅಚ್ಚರಿ! ಮಗು ವಾಸುದೇವ ಅನಂತೇಶ್ವರನ ಲಿಂಗದ ಮುಂದೆ ಕೈಮುಗಿದು ನಿಂತಿದ್ದಾನೆ.

ಮುಗುಳುನಗುತ್ತ ನಿಂತ ನಿರ್ಭಯ ಮಗು

ಅವರು ಸುರಿಸಿದ ಕಣ್ಣೀರು ಈಗ ಆನಂದಬಾಷ್ಪವಾಯಿತು. ಹೋದ ಜೀವ ಮರಳಿ ಬಂದಂತಾಯಿತು. ಯಾವ ಅನಂತೇಶ್ವರನ ಅನವರತ ಆರಾಧನೆಯ ಫಲವಾಗಿ ಈ ಮಗು ಹುಟ್ಟಿತ್ತೋ ಅವನ ಸನ್ನಿಧಿಯಲ್ಲೆ ಮತ್ತೆ ಮಗುವಿನ ದರ್ಶನ! ಏನೂ ನಡೆದಿಲ್ಲ ಎನ್ನುವಂತೆ ಸಹಜವಾಗಿ ಮುಗುಳುನಗುತ್ತ ನಿಂತಿದೆ ಮಗು! ನಡಿಲ್ಲಾಯರು ಅಕ್ಕರೆಯಿಂದ ಕೇಳಿದರು: 'ಮಗು ವಾಸುದೇವ, ನೀನೊಬ್ಬನೆ ಇಷ್ಟು ದೂರ ಹೇಗೆ ಬಂದೆ? ದಾರಿ ಹೇಗೆ ತಿಳಿಯಿತು ನಿನಗೆ?'

ದೇವರು ನನ್ನ ಜೊತೆಗಿದ್ದ!

'ಅಪ್ಪ ನಾನೊಬ್ಬನೆ ಬಂದದ್ದಲ್ಲ. ಮೊದಲು ಕಾನಂಗಿಯ (ಕೊಡವೂರಿನ) ಶಂಕರನಾರಾಯಣರನ್ನು ಕಂಡೆ. ಅಲ್ಲಿಂದ ತಾಳೆಕುಡೆ (ಬನ್ನಂಜೆ)ಯ ಮಹಾಲಿಂಗೇಶ್ವರನನ್ನು ಕಂಡೆ. ಅಲ್ಲಿಂದ ಇಲ್ಲಿಗೆ ಬಂದೆ. ಮೊದಲು ಮೂಡುದೇವಾಲಯದ ಚಂದ್ರಮೌಳೀಶ್ವರನನ್ನು ಕಂಡೆ. ಮತ್ತೆ ಪಡುದೇವಾಲಯದ ಈ ಲಿಂಗದಲ್ಲಿ ನೆಲೆಸಿರುವ ಮಹಾದೇವ ನಾರಾಯಣನನ್ನು ಕಂಡೆ. ಈ ಎಲ್ಲ ದೇವಾಲಯಗಳಲ್ಲಿ ನೆಲೆಸಿರುವ ದೇವರು ದಾರಿಯುದ್ದಕ್ಕೂ ನನ್ನ ಜತೆಗಿದ್ದ. ಅವನೇ ಜತೆಗಾರನಾಗಿ ಬಂದ. ಅವನೇ ದಾರಿ ತೋರಿಸಿದ.'

ಯಾರ ಅಂಕಿತಕ್ಕು ಸಿಗದ ಮಗು

ಮೂವತ್ತರ ಹರಯದಲ್ಲಿ ಮುಸ್ಲಿಂ ದೊರೆಯ ಬಳಿ ಹೇಳಿದ ಮಾತು, ಮೂರರ ಹಸುಳೆಯಾಗಿ ತಂದೆಯ ಬಳಿ ಆಡಿದ ಮಾತು- ಎರಡೂ ಒಂದೆ: 'ಭಗವಂತನ ಕರುಣೆಯಿಂದ ನಾವು ಬಂದೆವು.' ಮೊಳಕೆಯಲ್ಲಿ ಇರದ ಗುಣ ಬೆಳಕೆಯಲ್ಲಿ ಬಂದೀತೆ? ಹೌದು, ಇದು ಯಾರ ಅಂಕಿತಕ್ಕೂ ಸಿಗದ ಮಗು; ಭಗವಂತ ತೋರಿದ ದಾರಿಯಲ್ಲಿ ಮಾತ್ರವೆ ನಡೆಯಲೆಂದು ಬಂದ ಮಗು.

ಬರೆದದ್ದನ್ನೆ ಯಾಕೆ ಬರೆಯಬೇಕು?

ಮಗುವಿಗೆ ಮೂರು ವರ್ಷ ತುಂಬಿದಾಗ ತಂದೆ ಅಕ್ಷರಾಭ್ಯಾಸ ಮಾಡಿಸಿದರು. ಒಂದು ದಿನದ ಪಾಠ ಮುಗಿಯಿತು. ಮಾರಣೆಯ ದಿನ ಮತ್ತೆ ಅದೇ ಅಕ್ಷರಗಳನ್ನು ತಿದ್ದಿಸತೊಡಗಿದಾಗ ವಾಸುದೇವ ತಂದೆಯನ್ನು ಕೇಳಿದ: 'ಅಪ್ಪಾ, ಬರೆದದ್ದನ್ನೆ ಯಾಕೆ ಬರೆಸುತ್ತೀರಿ? ಅದನ್ನು ನಿನ್ನೆ ಹೇಳಿಕೊಟ್ಟಾಯಿತಲ್ಲ, ಇವತ್ತು ಹೊಸತೇನನ್ನಾದರೂ ಹೇಳಿಕೊಡಿ.'

ಮಾತು ಕರ್ಣಾನಂದ!

ತಂದೆ ನಡಿಲ್ಲಾಯರಿಗೆ ಒಂದೆಡೆ ಸಂತೋಷ; ಒಂದೆಡೆ ಆಶ್ಚರ್ಯ. ತನ್ನ ಮಗ ಎಂಥ ಪ್ರತಿಭಾಶಾಲಿ ಎಂಬ ಸಂತೋಷ. ಮೂರು ವರ್ಷದ ಹಸುಳೆಯಲ್ಲಿ ಇಂಥ ಮಿಂಚಿನ ಪ್ರತಿಭೆಯನ್ನು ಕಂಡು ಆಶ್ಚರ್ಯ. ಜತೆಗೆ ಎಲ್ಲಿ ಈ ಹುಡುಗನಿಗೆ ದೃಷ್ಟಿಯಾದೀತೋ ಎನ್ನುವ ಭಯ. ತಾಯಿ ದೃಷ್ಟಿ ನಿವಾಳಿಸಿದರೆ ತಂದೆ ಯಾರೂ ಕಾಣದ ಏಕಾಂತದಲ್ಲಿ ಮಗನಿಗೆ ಪಾಠ ಮಾಡತೊಡಗಿದರು. ಕೆಲವೇ ಸಮಯದಲ್ಲಿ ವಾಸುದೇವ ಯಾವುದೇ ಪುಸ್ತಕವನ್ನು ಸೊಗಸಾಗಿ ಓದಬಲ್ಲವನಾದ. ಅವನು ಓದುವುದನ್ನು ಕೇಳುವುದೇ ಒಂದು ಆನಂದ. ಅಂಥ ಕಂಠಮಾಧುರ್ಯ; ಅಂಥ ವಾಚನಚಾತುರ್ಯ. ಸರಸ್ವತಿ ವೀಣೆ ಪಕ್ಕಕ್ಕೆ ಸರಿಸಿ ಆಲಿಸಬೇಕು. ಕಂಚಿನ ಕಂಠದ ಮಾತಿನ ಮೋಡಿ ಕಿವಿಗೊಂದು ರಸಾಯನ.

ಪುರಾಣಿಕರ ತಪ್ಪನ್ನು ತಿದ್ದಿದ ಮಗು!

ವಾಸುದೇವನಿಗೆ ಆಗ ಸುಮಾರು ಐದು ವರ್ಷ. ಅವನ ತಾಯಿ ಅವನನ್ನು ನೇಯಂಪಳ್ಳಿ ಎಂಬಲ್ಲಿರುವ ದೇವಾಲಯಕ್ಕೆ ಕರೆದುಕೊಂಡು ಹೋಗಿದ್ದರು.

ಸಂಜೆಯ ಹೊತ್ತು ಪುರಾಣಪ್ರವಚನ ನಡೆದಿತ್ತು. ಮಡಿತ್ತಾಯ ಶಿವಭಟ್ಟರು ಆ ಭಾಗದಲ್ಲೆ ಪ್ರಸಿದ್ಧ ಪುರಾಣಿಕರು. ಜನರು ಆಸಕ್ತಿಯಿಂದ ಅವರ ವಾಚನವನ್ನಾಲಿಸುತ್ತಿದ್ದರು. ಆಗ ತಾಯಿಯ ಬಳಿ ಕುಳಿತಿದ್ದ ಪುಟ್ಟ ಬಾಲಕ ವಾಸುದೇವ ಎದ್ದು ನಿಂತ; ನಿಂತು ಶಿವಭಟ್ಟರಿಗೆ ಹೇಳಿದ: 'ಪುರಾಣಿಕರೆ, ಪುರಾಣದ ಅರ್ಥ ಒಂದು, ನೀವು ಹೇಳಿದ್ದು ಇನ್ನೊಂದು ಆಯಿತಲ್ಲ.'

ಶಿವಭಟ್ಟರಿಗೆ ಈ ವರ್ತನೆ ಅಧಿಕಪ್ರಸಂಗ ಅನ್ನಿಸಿರಬೇಕು. ಆದರೆ ವಾಸುದೇವ ನಿರರ್ಗಳವಾಗಿ ಶ್ಲೋಕದ ನಿಜವಾದ ಅರ್ಥವನ್ನು ಸಭೆಯ ಮುಂದೆ ವಿವರಿಸಿದ. ಜನ ತಲೆದೂಗಿದರು.

ಲಿಕುಚ ಎಂದರೆ ಹೆಬ್ಬಲಸು!

ಇನ್ನೊಮ್ಮೆ ತಂದೆ, ನಡಿಲ್ಲಾಯರೆ ಈ ಮಗನ ಕೈಯಲ್ಲಿ ಬೇಸ್ತು ಬಿದ್ದರು. ಅವರೂ ಆ ಕಾಲದ ಪ್ರಸಿದ್ಧ ಪುರಾಣಿಕರು. ಒಮ್ಮೆ ಪುರಾಣ ವಾಚನ ನಡೆದಿತ್ತು. ಒಂದು ಶಬ್ದದ ಅರ್ಥ ಅವರಿಗೆ ಆ ಕ್ಷಣ ಹೊಳೆಯಲಿಲ್ಲ, ಅವರು ಆ ಶಬ್ದವನ್ನು ಬಿಟ್ಟೇ ಮುಂದುವರಿಸಿದರು. ತಕ್ಷಣ ವಾಸುದೇವ ಎದ್ದು ನಿಂತು ನುಡಿದ: 'ಅಪ್ಪಾ, ನೀವು 'ಲಿಕುಚ' ಶಬ್ದದ ಅರ್ಥವನ್ನು ಹೇಳಲೇ ಇಲ್ಲ, 'ಹೆಬ್ಬಲಸು' ಎಂದಲ್ಲವೆ ಅಪ್ಪಾ, ಅದರ ಅರ್ಥ?'

ತಂದೆಗೆ ನಾಚಿಕೆಯೆನ್ನಿಸಲಿಲ್ಲ, ಮಗನಿಂದ ಒಂದು ಹೊಸ ಶಬ್ದದ ಅರ್ಥ ತಿಳಿಯಿತಲ್ಲ ಎಂದು ಸಂತೋಷವಾಯಿತು. ಇಂಥ ಮಗನ ತಂದೆಯಾದುದಕ್ಕಾಗಿ ಹೆಮ್ಮೆಯೆನಿಸಿತು.

ಆಟದ ಬಯಲಲ್ಲಿ ತುಂಟ ಹುಡುಗ

ವಾಸುದೇವನಿಗೆ ಏಳು ವರ್ಷವಾಯಿತು. ನಡಿಲ್ಲಾಯರು ಮಗನಿಗೆ ಸಕಾಲದಲ್ಲಿ ಉಪನಯನ ಮಾಡಿದರು. ಅನಂತರ ವೇದಾಧ್ಯಯನಕ್ಕಾಗಿ ಗುರುಕುಲವಾಸ. ಆ ಕಾಲದ ಹಿರಿಯ ವೇದಜ್ಞರಾದ ತೋಟಂತಿಲ್ಲಾಯರಲ್ಲಿ ವಾಸುದೇವನ ಅಧ್ಯಯನ ಪ್ರಾರಂಭವಾಯಿತು. (ತೋಟಂತಿಲ್ಲಾಯರು ಎಂದರೆ ತೋಟದ ಮನೆಯವರು. ಇದೂ ತೌಳವರ ಮನೆತನವೊಂದರ ಅಡ್ಡ ಹೆಸರು. ಸಂಸ್ಕೃತದಲ್ಲಿ ಪೂಗವನ. ಕಂಗಿಲ್ಲಾಯರು ಎಂದರೂ ಸರಿಯೆ. ಅಡಿಕೆಯ ತೋಟದ ಮನೆಯವರು ಎಂದರ್ಥ.)

ವಾಸುದೇವನ ಕ್ರಮ ತೋಟಂತಿಲ್ಲಾಯರಿಗೆ ವಿಚಿತ್ರವೆನಿಸಿತು. ಪಾಠದ ಹೊತ್ತಿಗಷ್ಟೆ ಗುರುಗಳ ಎದುರು ಮೋರೆ ತೋರಿಸುತ್ತಿದ್ದ. ಉಳಿದ ಸಮಯವೆಲ್ಲ ಆಟದ ಬಯಲಲ್ಲಿ.

'ಇವ ಹನುಮ; ಇವ ಭೀಮ'!

ವಯಸ್ಸಿಗೆ ಮೀರಿ ದೃಢಕಾಯನಾದ ವಾಸುದೇವ ಆಟದ ಬಯಲಿಗೆ ಇಳಿದನೆಂದರೆ ಸಹಪಾಠಿಗಳೆಲ್ಲ ಅವನ ಸುತ್ತುವರಿಯುತ್ತಿದ್ದರು. ಒಂದೊಂದು ದಿನ ಒಂದೊಂದು ಬಗೆಯ ಆಟ. ಒಂದು ದಿನ ವೇಗದ ಓಟದ ಸ್ಪರ್ಧೆ. ಮೊದಲು ಗುರಿ ಮುಟ್ಟಿದವ ವಾಸುದೇವ. ಇನ್ನೊಮ್ಮೆ ಈಜಾಟದ ಸ್ಪರ್ಧೆ. ಅದರಲ್ಲೂ ಮೊದಲು ತುದಿ ಮುಟ್ಟಿದವ ವಾಸುದೇವ. ಮತ್ತೊಮ್ಮೆ ಜಟ್ಟಿಕಾಳಗ. ಎಲ್ಲ ಸಹಪಾಠಿಗಳು ಜತೆಯಾಗಿ ಮೇಲೆರಗಿದರೂ ವಾಸುದೇವ ಮಿಸುಕಾಡಲಿಲ್ಲ, ಆದರೆ ವಾಸುದೇವನ ಒಂದು ಹೊಡೆತಕ್ಕೆ ಎಲ್ಲರೂ ಮುಗ್ಗರಿಸಿಬಿದ್ದರು. 'ನೀರು ದಾಟುವುದರಲ್ಲಿ ಇವನು ಹನುಮ, ಭಾರ ಎತ್ತುವುದರಲ್ಲಿ ಇವನು ಭೀಮ'. ಎಂದು ಸಹಪಾಠಿಗಳು ಮೂಗಿಗೆ ಬೆರಳೇರಿಸಿದರು.

ವೇದಮಾತೆ ನಲಿದಳು!

ಒಮ್ಮೆ ತೋಟಂತಿಲ್ಲಾಯರು ವಾಸುದೇವನನ್ನು ಕರೆದು ತಿಳಿಹೇಳಿದರು: 'ಮಗೂ, ಬರಿದೆ ಆಟದಲ್ಲಿ ಕಾಲ ಕಳೆಯಬೇಡ. ಪಾಠ ಕೇಳಿದ್ದನ್ನು ಕಂಠಪಾಠ ಮಾಡಿ ಜಾಣನಾಗಬೇಕು.'

ವಾಸುದೇವ ಉತ್ತರಿಸಿದ: 'ಒಮ್ಮೆ ಕೇಳಿದ್ದನ್ನು ಮತ್ತೆಮತ್ತೆ ಉರುಹೊಡೆಯುವುದೆಂದರೆ ಬೇಜಾರು ಗುರುಗಳೆ.'

ಗುರು ತೋಟಂತಿಲ್ಲಾಯರಿಗೆ ಈ ಉತ್ತರ ಸರಿಬರಲಿಲ್ಲ, ಅವರು ಹಂಗಿಸುವ ದನಿಯಲ್ಲಿ ಹೇಳಿದರು: 'ಓಹೋ, ಮಹಾ ಬೃಹಸ್ಪತಿ ನೀನು. ಓದದೆಯೆ ಎಲ್ಲ ಬಂದು ಬಿಡುತ್ತದೆ- ಅಲ್ಲವೆ? ಹಾಗಾದರೆ ಈ ಮೊದಲು ಆದ ಸೂಕ್ತಗಳನ್ನು ಹೇಳಿ ತೋರಿಸು ನೋಡೋಣ.'



ಹುಡುಗನ ಹೆಜ್ಜೆಯಡಿ ನುಗ್ಗಿದ ನಾಗರಹಾವು

ವಾಸುದೇವ ಪದ್ಮಾಸನ ಹಾಕಿ ಕುಳಿತ. ಅವರು ಕೇಳಿದ ಎಲ್ಲ ಸೂಕ್ತಗಳನ್ನೂ ಸ್ವರಶುದ್ಧವಾಗಿ ಹೇಳಿ ತೋರಿಸಿದ. ಅಂದಿನಿಂದ ತೋಟಂತಿಲ್ಲಾಯರು ಈ ಶಿಷ್ಯನನ್ನು ಪರೀಕ್ಷೆ ಮಾಡುವ ಸಾಹಸಕ್ಕೆ ಇಳಿಯಲಿಲ್ಲ. ಅವನ ಆಟ-ಪಾಠಗಳು ಸಾಂಗವಾಗಿ ನೆಡದವು.

ಹೆಜ್ಜೆಯಡಿ ನುಗ್ಗಾದ ನಾಗರಹಾವು

ಪಾಜಕದ ಪಕ್ಕದಲ್ಲಿ ಒಂದು ಭಾರಿಗಾತ್ರದ ನಾಗರಹಾವು ಓಡಾಡುತ್ತಿತ್ತು. ಊರ ಜನರೆಲ್ಲ ಓಡಾಡಲು ಹೆದರಿದರು. ಅದು ದೇವಬಾಲಕನಾದ ವಾಸುದೇವನನ್ನು ಕಚ್ಚಿ ಸಾಯಿಸಲೆಂದು ಹಾವಿನ ರೂಪ ತೊಟ್ಟು ಬಂದ ಅಸುರನೆಂದು ಯಾರಿಗೂ ತಿಳಿಯಲಿಲ್ಲ.

ಒಮ್ಮೆ ವಾಸುದೇವ ನಡೆದು ಬರುವ ದಾರಿಗೆ ಅಡ್ಡವಾಗಿ ಮಲಗಿತ್ತು ಆ ಹಾವು. ಅದರ ಸಾವಿನ ಕ್ಷಣ ಸಮೀಪಿಸಿತ್ತು. ವಾಸುದೇವ ಅದರ ಬಳಿಗೇ ನಡೆದು ಬಂದ. ಈ ಕ್ಷಣಕ್ಕಾಗಿ ಕಾದು ಕುಳಿತಿದ್ದ ಆ ಹಾವು ವಾಸುದೇವನನ್ನು ಕಚ್ಚಿ ಸಾಯಿಸಬೇಕೆಂದು ತಲೆ ಎತ್ತಿತು. ವಾಸುದೇವ ನಿರ್ಭಯನಾಗಿ ತನ್ನ ಪುಟ್ಟ ಪಾದವನ್ನು ಹಾವಿನ ತಲೆಯ ಮೇಲಿಟ್ಟ. ಹಾವು ನಜ್ಜುಗುಜ್ಜಾಯಿತು. ಅಸುರ ನರಕದ ದಾರಿ ಹಿಡಿದ.

ತಂದೆ-ತಾಯಿ ಗಾಬರಿಯಾದರು. ತಂದೆ ಶಾಂತಿಮಂತ್ರ ಪಠಿಸಿದರು. ದೇವತೆಗಳು ಹಿರಿಹಿಗ್ಗಿ ಕೊಂಡಾಡಿದರು.

ಭಗವಂತನಿಗಲ್ಲದೆ ಇನ್ನೊಬ್ಬನಿಗೆ ತಲೆಬಾಗದಿರಿ

ಆಚಾರ್ಯಮಧ್ವರು ದೇಹದಾರ್ಢ್ಯಕ್ಕೆ ತುಂಬ ಮಹತ್ವವನ್ನು ಕೊಟ್ಟವರು. ದೇಶದ ಜನಾಂಗ ಬೌದ್ಧಿಕವಾಗಿ ಮಾತ್ರವಲ್ಲ, ದೈಹಿಕವಾಗಿ ಕೂಡ ಸಶಕ್ತವಾಗಿರಬೇಕು ಎನ್ನುವುದು ಅವರ ಜೀವನಸಂದೇಶವಾಗಿತ್ತು.

ದುರ್ಬಲದೇಹದಲ್ಲಿ ಬುದ್ಧಿಯೂ ಬಲಿಷ್ಠವಾಗಿ ಬೆಳೆಯಲಾರದು. ದೇಹ ಬಲಿಷ್ಠವಾಗಿರಬೇಕು. ಆದರೆ ದೇಹ ಮಾತ್ರವೆ ಬಲಿಷ್ಠವಾಗದಂತೆ ಎಚ್ಚರ ವಹಿಸಬೇಕು.

ಆಚಾರ್ಯರು ತಮ್ಮ ಸನ್ನ್ಯಾಸಿ ಶಿಷ್ಯರಿಗೆ ಕೂಡ ಈ ಅಂಗ-ಸಾಧನೆಯ ನಿಯಮವನ್ನು ಕಡ್ಡಾಯವಾಗಿ ಕಲಿಸುತ್ತಿದ್ದರು. 'ಜಗತ್ತಿನಲ್ಲಿ ಭಗವಂತನಿಗಲ್ಲದೆ ಇನ್ನೊಬ್ಬನಿಗೆ ತಲೆ ತಗ್ಗಿಸಬೇಡಿ. ಎದೆ ಸೆಟೆದು ನಿರ್ಭಯವಾಗಿ ನಿಲ್ಲಲು ಕಲಿಯಿರಿ', ಎಂದು ಅವರು ಸದಾ ಬೋಧಿಸುತ್ತಿದ್ದರು.

ಗುರುಶಿಷ್ಯರ ಮಲ್ಲಯುದ್ಧ

ಆಚಾರ್ಯರ ನಲವತ್ತರ ಹರೆಯದಲ್ಲಿ ಒಮ್ಮೆ ಹೀಗೆ ನಡೆಯಿತು: ಹದಿನೈದು ಮಂದಿ ಶಿಷ್ಯರ ಜತೆ ಆಗ ಅವರು ವಾರಾಣಸಿಯಲ್ಲಿ ವಾಸವಾಗಿದ್ದರು. ಶಿಷ್ಯರು ತಮ್ಮ ದೇಹದಾರ್ಢ್ಯದ ಬಗೆಗೆ ಕೊಚ್ಚಿಕೊಳ್ಳುತ್ತಿರುವುದು ಒಮ್ಮೆ ಅವರ ಕಿವಿಗೆ ಬಿತ್ತು. ಅವರ ಕಣ್ಣು ತೆರೆಯಿಸಬೇಕು ಎನ್ನಿಸಿತು ಆಚಾರ್ಯರಿಗೆ. ಅವರು ಶಿಷ್ಯರನ್ನು ಕರೆದು ವಿನೋದವಾಗಿ ನುಡಿದರು: 'ನಿಮ್ಮ ಬುದ್ಧಿಬಲವನ್ನು ನಾನು ಹಲವು ಬಾರಿ ಪರೀಕ್ಷಿಸಿದ್ದುಂಟು. ದೇಹಬಲವನ್ನೀಗ ಪರೀಕ್ಷಿಸಬೇಕಾಗಿದೆ. ನೀವು ಇಷ್ಟೂ ಮಂದಿ ಏಕಕಾಲದಲ್ಲಿ ನನ್ನ ಜತೆ ಹೋರಾಡಬೇಕು. ಯಾರಾದರೂ ಹಿಂದೆಗೆದರೆ ಗುರ್ವಾಜ್ಞೆಯನ್ನು ಉಲ್ಲಂಘಿಸಿದಂತಾದೀತು.'

ಇಪ್ಪತ್ತರ ಆಚೆ ಈಚೆ ಅಂಚಿನಲ್ಲಿರುವ ಹದಿನೈದು ಮಂದಿ ಶಿಷ್ಯರಿಗೂ ನಲವತ್ತರ ಗುರುವಿಗೂ ನಡುವೆ ಅಪೂರ್ವವಾದ ಮಲ್ಲಯುದ್ಧ. ತನ್ನ ಮೇಲೆ ಎರಗಿಬಂದ ಶಿಷ್ಯರನ್ನು ಆಚಾರ್ಯರು ಒಂದೇ ಕೈಯಿಂದ ತಡೆದು ತಳ್ಳಿದರು. ಹದಿನೈದು ಮಂದಿಯೂ ಉರುಳಿಬಿದ್ದರು.

ವೇದಾಂತದ ಗುರು ಜಟ್ಟಿಯಾದರು

ಆಚಾರ್ಯರು ಕೈಯ ಒತ್ತಡವನ್ನು ಬಿಗಿಗೊಳಿಸಿ ನಗುತ್ತ ನುಡಿದರು: 'ಏಕೆ ಬಿದ್ದೇ ಇದ್ದೀರಿ? ನನ್ನ ಕೈಯ ಹಿಡಿತವನ್ನು ತಪ್ಪಿಸಿಕೊಂಡು ಎದ್ದು ನಿಲ್ಲಿ'. ಶಿಷ್ಯರು ಮಲಗಿದಲ್ಲೆ ಬಿನ್ನವಿಸಿಕೊಂಡರು: 'ತಮ್ಮ ಒಂದೊಂದು ಬೆರಳೂ ಬೆಟ್ಟದ ಭಾರದಿಂದ ನಮ್ಮನ್ನು ಅದುಮಿ ಹಿಡಿದಿದೆ. ನಮಗೆ ಉಸಿರಾಡುವುದೂ ಕಷ್ಟವಾಗಿದೆ. ದಯವಿಟ್ಟು ಕೈಯ ಹಿಡಿತವನ್ನು ಸಡಿಲಗೊಳಿಸಿರಿ.'

ಗುರುಗಳು ವೇದಾಂತದಲ್ಲಿ ಗಟ್ಟಿ ಎನ್ನುವುದು ಶಿಷ್ಯರಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಅವರು ಅಗತ್ಯ ಬಂದಾಗ ಜಟ್ಟಿಯೂ ಆಗಬಲ್ಲರು ಎನ್ನುವುದು ಈಗ ಅವರಿಗೆ ತಿಳಿಯಿತು.

ದಂಡ ಹಿಡಿದ ಕೈಯಲ್ಲಿ ಕೊಡಲಿ

ಜೀವನದಲ್ಲಿ ಆಪತ್ತು ಒದಗಿದಾಗ ಹೇಗೆ ಎದುರಿಸಬೇಕು ಎನ್ನುವುದನ್ನು ಅವರು ಶಿಷ್ಯರಿಗೆ ಕಲಿಸಿದ ಇನ್ನೊಂದು ಘಟನೆ ಅದ್ಭುತವಾದದ್ದು: ಬದರಿಯ ಕಡೆ ಪಯಣ ಹೊರಟಿತ್ತು. ಹಿಮಾಲಯದ ಏರು ತಗ್ಗುಗಳ ದುರ್ಗಮ ಅರಣ್ಯದಲ್ಲಿ ಸನ್ಯಾಸಿಗಳ ಪಡೆ ನಡೆದಿತ್ತು. ಶಿಷ್ಯರ ತಲೆಯ ಮೇಲೆ ಪೂಜಾವಸ್ತು ಮತ್ತು ಪುಸ್ತಕಗಳ ಗಂಟು. ಇದ್ದಕ್ಕಿದ್ದಂತೆ ದರೋಡೆಕೋರರ ಗುಂಪೊಂದು ಇವರನ್ನು ಅಡ್ಡಗಟ್ಟಿತು. ಕೈಯಲ್ಲಿ ಕೊಡಲಿ ಹಿಡಿದು ಎದುರಾದ ಈ ಕಂಟಕವನ್ನು ಕಂಡು ಶಿಷ್ಯರು ಗಲಿಬಿಲಿಗೊಂಡರು. ಆಚಾರ್ಯರ ಶ್ರೀಮುಖದಲ್ಲಿ ಮಾತ್ರ ಮಂದಹಾಸ ಮಾಸಲಿಲ್ಲ. ಅವರು ತಮ್ಮ ಶಿಷ್ಯರಲ್ಲಿ ಒಬ್ಬರಾದ ಉಪೇಂದ್ರತೀರ್ಥರನ್ನು ಕರೆದು ನುಡಿದರು: 'ಉಪೇಂದ್ರ, ನಿನ್ನ ಸಹಯಾತ್ರಿಕರಿಗೆ ಆಪತ್ತು ಬಂದಾಗ ಏನು ನೋಡುತ್ತ ನಿಂತಿರುವೆ? ದಂಡ ಹಿಡಿದ ಕೈಗೆ ಕೊಡಲಿ ಹಿಡಿಯುವುದೂ ತಿಳಿದಿರಬೇಕು. ನಡೆ ಮುಂದೆ.' (ಈ ಉಪೇಂದ್ರ-ತೀರ್ಥರೇ ಉಡುಪಿಯ ಅಷ್ಟಮಠಗಳಲ್ಲೊಂದಾದ ಶ್ರೀಪುತ್ತಿಗೆಮಠದ





ಮೂಲ ಪುರುಷರು. ಅದಕೆಂದೆ ಆ ಮಠವನ್ನು 'ಉಪೇಂದ್ರತೀರ್ಥ-ಸಂಸ್ಥಾನ' ಎಂದು ಕರೆಯುತ್ತಾರೆ. ಆ ಮಠದಲ್ಲಿ ಪೂಜೆಗೊಳ್ಳುವ ವಿಟ್ಠಲನೇ ಉಪೇಂದ್ರವಿಟ್ಠಲ.)

ಗುರುಗಳ ಆದೇಶದಿಂದ ಉಪೇಂದ್ರತೀರ್ಥರಿಗೆ ವೀರಾವೇಶ ಬಂದಂತಾಯಿತು. ಅವರು ಗಾಳಿಯಂತೆ ರೊಯ್ಯನೆ ಮುನ್ನುಗ್ಗಿ ಒಬ್ಬ ದರೋಡೆಕೋರನ ಕೈಯಲ್ಲಿದ್ದ ಕೊಡಲಿಯನ್ನೇ ಕಿತ್ತುಕೊಂಡು ಬೀಸತೊಡಗಿದರು. ಈ ಸನ್ನ್ಯಾಸಿಯ ಬೀರ(ಶೌರ್ಯ)ವನ್ನು ಕಂಡು ಕಂಗಾಲಾದ ದರೋಡೆಕೋರರು ಕಾಲಿಗೆ ಬುದ್ಧಿ ಹೇಳಿದರು.

'ನಾನು ಸನ್ನ್ಯಾಸಿಯಾಗಲಿದ್ದೇನೆ'

ಹೀಗೆ ವೇದಾಂತ ಸಾಮ್ರಾಜ್ಯದ ವೀರಸೇನಾನಿಯಂತೆ ಬದುಕಿದ ಆಚಾರ್ಯರು ದಂಡಪಾಣಿಗಳಾಗಿ ಸನ್ನ್ಯಾಸ ಸ್ವೀಕರಿಸಿದ ಕಥೆಯೂ ಒಂದು ವಿಚಿತ್ರವೆ.

ಆಗ ವಾಸುದೇವನಿಗೆ ಹನ್ನೊಂದು ವರ್ಷ. ಒಂದು ಮುಂಜಾನೆ ಎದ್ದವನೆ ಅವನು ನೇರ ಮನೆಯಿಂದ ಉಡುಪಿಗೆ ಬಂದ. ಉಡುಪಿಯಲ್ಲಿ ಆಗ ಅಚ್ಯುತಪ್ರಜ್ಞರೆಂಬ ಖ್ಯಾತ ಯತಿಗಳು ನೆಲಸಿದ್ದರು. (ಅನಂತರದ ಜನ ಇವರನ್ನು 'ಅಚ್ಯುತಪ್ರೇಕ್ಷರು' ಎಂದು ತಪ್ಪಾಗಿ ಕರೆದರು.) ವಾಸುದೇವ ಅವರ ಶಿಷ್ಯತ್ವ ಸ್ವೀಕರಿಸಿ ಮಠದಲ್ಲೆ ನಿಂತುಬಿಟ್ಟ. ಮನೆಯಲ್ಲಿ ಮಗ ಕಾಣೆಯಾದದ್ದನ್ನು ಕಂಡು ನಡಿಲ್ಲಾಯರು ಮಗನನ್ನು ಹುಡುಕಿಕೊಂಡು ಮಠಕ್ಕೆ ಬಂದರು. ತಂದೆಯನ್ನು ಕಂಡು ಮಗನೆ ಉತ್ತರಿಸಿದ: 'ನನ್ನ ಬದುಕಿನ ಉದ್ದೇಶವನ್ನು ನಾನು ಪೂರೈಸ-ಬೇಕಾಗಿದೆ. ನನ್ನನ್ನು ನನ್ನಷ್ಟಕ್ಕೆಯೆ ಬಿಟ್ಟುಬಿಡಿ. ನಾನು ಸನ್ನ್ಯಾಸಿಯಾಗಲಿದ್ದೇನೆ.'

ವಂಶವೃಕ್ಷ ಬೆಳೆಸು

ವಾಸುದೇವನ ಅನಂತರ ಹುಟ್ಟಿದ ಇಬ್ಬರು ಗಂಡುಮಕ್ಕಳೂ ಚಿಕ್ಕಂದಿನಲ್ಲೆ ತೀರಿಕೊಂಡಿದ್ದರು. ಇದ್ದ ಒಬ್ಬ ಮಗನೂ ಸನ್ಯಾಸಿ-ಯಾಗುತ್ತಾನೆ ಎಂದರೆ ಮುದಿ ತಂದೆಗೆ ಹೇಗಾಗಬೇಡ? ಆದರೆ ಈ ಮಗ ತಾನು ಹಿಡಿದ ಛಲವನ್ನು ಬಿಡುವವನಲ್ಲ, ಹೇಗೆ ಇವನ ಮನವೊಲಿಸುವುದು ಎಂದು ತೋಚದೆ ದಿಕ್ಕುಗೆಟ್ಟು ನಡಿಲ್ಲಾಯರು ಮಗನ ಕಾಲಿಗೆ ಅಡ್ಡಬಿದ್ದು ಗೋಗರೆದರು: 'ನಿನ್ನ ದಮ್ಮಯ್ಯ, ಸನ್ಯಾಸ ತೆಗೆದುಕೊಂಡು ನಮ್ಮನ್ನು ದಾರಿಯಲ್ಲಿ ಹಾಕಬೇಡ.'

ವಾಸುದೇವನ ಉತ್ತರ ಸಿದ್ಧವಾಗಿತ್ತು: 'ಅಪ್ಪಾ, ಸನ್ಯಾಸಿಯಲ್ಲದ ಮಗನಿಗೆ ತಂದೆ ನಮಸ್ಕರಿಸುವುದು ತಪ್ಪು. ನೀವೀಗ ನನಗೆ ನಮಸ್ಕರಿಸಿದ್ದರಿಂದ ನನ್ನನ್ನು ಸನ್ಯಾಸಿ ಎಂದು ಒಪ್ಪಿಕೊಂಡಂತೆಯೇ ಆಯಿತು.'

ಧೈರ್ಯವಿದ್ದರೆ ಬಾವಿಗೆ ಹಾರಿ

ತಂದೆ-ಮಗನಲ್ಲಿ ಎಷ್ಟೋ ಹೊತ್ತು ವಾದ ನಡೆಯಿತು. ವಾಸುದೇವ ಎಲ್ಲ ವಾದಗಳಿಗೂ ಉತ್ತರ ಕೊಟ್ಟ, ತಂದೆ ಕೊನೆಯ ಅಸ್ತ್ರ ಮುಂದಿಟ್ಟರು: 'ನಿನ್ನ ಹಠವೇ ನಿನಗೆ ಮುಖ್ಯವಾದರೆ ನಾನು ಕೆರೆ-ಬಾವಿ ನೋಡಬೇಕಾಗುತ್ತದೆ.'

ವಾಸುದೇವ ಒಡನೆ, ತನ್ನ ಪಂಚೆಯನ್ನು ಹರಿದು ಲಂಗೋಟಿ ಉಟ್ಟು, ದಿಟ್ಟವಾಗಿ ಉತ್ತರಿಸಿದ: 'ಅಪ್ಪಾ' ನನಗೆ ಹೇಳಿದ್ದನ್ನು ಮಾಡುವ ಧೈರ್ಯವಿದೆ. ನಿಮಗೆ ಬಾವಿಗೆ ಹಾರುವ ಧೈರ್ಯವಿದ್ದರೆ ಹಾರಬಹುದು.'

ತಂದೆ ನಡಿಲ್ಲಾಯರು ಮಾತು ಮೂಕವಾಗಿ ನಿಂತುಬಿಟ್ಟರು.


ತಾಯಿಯನ್ನೊಪ್ಪಿಸುವ ಕೆಲಸ ನನಗೆ ಬಿಡಿ

ನಡಿಲ್ಲಾಯರಿಗೆ ಈಗ ಒಂದೇ ಒಂದು ಆಸೆಯ ತಂತು ಉಳಿದಿತ್ತು. ಅದನ್ನು ಪ್ರಯೋಗಿಸಿ ನೋಡಿದರು: 'ನಾನೇನೋ ಮನಸ್ಸನ್ನು ಗಟ್ಟಿಮಾಡಿಕೊಂಡು ಒಪ್ಪಿಗೆ ಕೊಡಬಲ್ಲೆ. ಆದರೆ ನಿನ್ನ ತಾಯಿಯನ್ನು ಒಪ್ಪಿಸುವುದು ಅಸಾಧ್ಯ'.

'ತಾಯಿಯನ್ನು ಒಪ್ಪಿಸುವ ಕೆಲಸ ನನಗೆ ಬಿಡಿ', ಎಂದ ವಾಸುದೇವ. ನಡಿಲ್ಲಾಯರು ಮನಗೆ ಬಂದು ಹೆಂಡತಿಯನ್ನು ಎಚ್ಚರಿಸಿದರು: 'ವಾಸುದೇವ ಬಂದು ಕೇಳಿದರೆ ಎಷ್ಟು ಮಾತ್ರಕ್ಕೂ ಸಂನ್ಯಾಸಕ್ಕೆ ಒಪ್ಪಿಗೆ ಕೊಡಬೇಡ.'

ತಮ್ಮನೊಬ್ಬ ಹುಟ್ಟಿದ

ಆದರೆ ವಾಸುದೇವನಿಗೆ ಗೊತ್ತು – ತನ್ನ ಕಾರ್ಯ ಹೇಗೆ ಸಾಧಿಸುವುದು ಎನ್ನುವುದು. ಅವನು ತಾಯಿಯ ಬಳಿ ಬಂದ. ತಾಯಿ ಸಿದ್ಧ ಮಾಡಿಟ್ಟ ಅಸ್ತ್ರ ಹೊರಬರುವ ಮುನ್ನವೆ ಅವನ ಅಸ್ತ್ರ ಹೊರಬಿತ್ತು: 'ಅಮ್ಮ, ನಿನಗೆ ಈ ಮಗ ನಿನ್ನ ಕಣ್ಣುಮುಂದೆ ಇರಬೇಕು ಎಂಬ ಆಸೆ ಇದ್ದರೆ ಸಂನ್ಯಾಸಕ್ಕೆ ಒಪ್ಪಿಗೆ ಕೊಡು. ಇಲ್ಲ, ಈ ಮಗನ ಆಸೆ ಬಿಟ್ಟು ಬಿಡು. ಎಂದೆಂದಿಗೂ ನಾನು ನಿನ್ನ ಪಾಲಿಗೆ ಇಲ್ಲವಾದಂತೆಯೆ ಎಂದು ತಿಳಿ.' ಅಸ್ತ್ರ ಪರಿಣಾಮ ಬೀರಿತು. ತಾಯಿ ನಿರುಪಾಯರಾಗಿ ಒಪ್ಪಿಗೆ ನೀಡಿದರು. ಆದರೆ ಅವರದು ಒಂದೇ ಕೊರಗು: 'ಮುಪ್ಪಿನಲ್ಲಿ ತಮ್ಮನ್ನು ನೋಡಿಕೊಳ್ಳಲು ಇದ್ದ ಒಬ್ಬ ಮಗನೂ ದಕ್ಕಲಿಲ್ಲವಲ್ಲ', ಎಂದು. ಇದಕ್ಕೂ ವಾಸುದೇವನ ಬಳಿ ತಕ್ಕ ಪರಿಹಾರ ಸಿದ್ಧವಾಗಿತ್ತು: 'ನಿಮ್ಮನ್ನು ನೋಡಿಕೊಳ್ಳಲು ಇನ್ನೊಬ್ಬ ಮಗ ಹುಟ್ಟದ ತನಕ ನಾನು ಸನ್ನ್ಯಾಸಿಯಾಗುವುದಿಲ್ಲ, ಸರಿ ತಾನೆ?'



ತಾಯಿಯನ್ನು ಒಪ್ಪಿಸುವ ಕೆಲಸ ನನಗೆ ಬಿಡಿ

ತಾಯಿ ಸತ್ಯವತಿ ಮುಂದಿನ ವರ್ಷವೆ ಒಂದು ಗಂಡು ಮಗುವನ್ನು ಹೆತ್ತರು. ಈ ಮಗನೆ ಕೊನೆಯ ಕಾಲದ ತನಕ ತಂದೆ ತಾಯಿಗಳ ಸೇವೆ ಮಾಡಿ ಕೊನೆಗೆ ತಾನೂ ಆಚಾರ್ಯರ ಬಳಿ ಸಂನ್ಯಾಸ ಸ್ವೀಕರಿಸಿದರು. ಇವರೇ ಮುಂದೆ ವಿಷ್ಣುತೀರ್ಥರೆಂದು ಪ್ರಸಿದ್ಧರಾದರು. ಜೀವಮಾನವೆಲ್ಲ ಎಲೆ-ಹಣ್ಣು ತಿಂದು ಕಠಿಣ ತಪಸ್ಸನ್ನಾಚರಿಸಿದ ಮಹಾಯೋಗಿಗಳು. ಅಣ್ಣನಿಗೆ ತಕ್ಕ ತಮ್ಮ. ಓಂಕಾರದ ಅಂತರಂಗವನ್ನರಿತು ಸಿದ್ಧಿ ಪಡೆದ ಮಹಾಸನ್ನ್ಯಾಸಿ.

ದಿಗಂತಪಂಡಿತರು ಶರಣಾದರು

ಕೊನೆಗೂ ತಂದೆ ತಾಯಿ ಸೋತರು. ವಾಸುದೇವ ಅಚ್ಯುತಪ್ರಜ್ಞರ ಬಳಿ ಸನ್ನ್ಯಾಸದೀಕ್ಷೆ ಪಡೆದು ದಂಡಧಾರಿಯಾದ. ನಡಿಲ್ಲಾಯ ವಾಸುದೇವ ಭಟ್ಟ 'ಪೂರ್ಣಪ್ರಜ್ಞ'ರಾದರು.

ಆಗಿನ್ನೂ ಪೂರ್ಣಪ್ರಜ್ಞರಿಗೆ ಹನ್ನೆರಡು ವರ್ಷ. ಸನ್ನ್ಯಾಸಿ ಆಗಿ ನಲವತ್ತು ದಿನಗಳಷ್ಟೆ ಸಂದಿವೆ. ಆ ಸಮಯದಲ್ಲಿ ಪ್ರಚಂಡ ತಾರ್ಕಿಕರಾದ ವಾಸುದೇವ ಪಂಡಿತರು ಮುಂತಾದವರು ವಿಜಯಪತ್ರದೊಡನೆ ಉಡುಪಿಗೆ ಬಂದರು. ಅಚ್ಯುತಪ್ರಜ್ಞರು ತನ್ನ ಹೊಸ ಶಿಷ್ಯನನ್ನು ಅವರ ಜತೆ ವಾದಕ್ಕೆ ಕಳುಹಿಸಿದರು. ಹನ್ನೆರಡರ ಹರಯದ ಪುಟ್ಟ ಪೂರ್ಣಪ್ರಜ್ಞರು ದಿಗಂತಖ್ಯಾತಿಯ ದಿಗ್ಗಜ ಪಂಡಿತರನ್ನು ಸುಲಭದಲ್ಲಿಯೇ ನಿರುತ್ತರಗೊಳಿಸಿದರು.

ಪೂರ್ಣಪ್ರಜ್ಞ-ಆನಂದತೀರ್ಥ-ಮಧ್ವ

ಹನ್ನೆರಡರ ಹರಯದಲ್ಲೆ ಅರಳಿನಿಂತ ಈ ಪೂರ್ಣಪ್ರತಿಭೆಯನ್ನು ಕಂಡು ಅಚ್ಯುತಪ್ರಜ್ಞರು ಆನಂದತುಂದಿಲರಾದರು. ಎಂದೇ ಅವರು ಪೂರ್ಣಪ್ರಜ್ಞರನ್ನು ವೇದಾಂತಪೀಠದಲ್ಲಿ ಕುಳ್ಳಿರಿಸಿ ಅಭಿಷೇಕಗೈದು 'ಆನಂದತೀರ್ಥ' ಎಂದು ನಾಮಕರಣ ಮಾಡಿದರು.

ಹೀಗೆ ಆಚಾರ್ಯರ ಆಶ್ರಮ ನಾಮಧೇಯ ಪೂರ್ಣಪ್ರಜ್ಞ. ವೇದಾಂತಸಾಮ್ರಾಜ್ಯದಲ್ಲಿ ಅಭಿಷಿಕ್ತರಾದಾಗ ಇಟ್ಟ ಹೆಸರು ಆನಂದ ತೀರ್ಥ. ಮಧ್ವ ಎನ್ನುವುದು ಅವರ ವೈದಿಕನಾಮಧೇಯ: **'ಮಧ್ವ ಆಥರ್ವೇ ಗುಹಾ ಸಂತಂ ಮಾತರಿಶ್ವಾ ಮಥಾಯತಿ'**. ಮುಂದೆ ಈ ಹೆಸರಿನಿಂದಲೇ ಅವರು ಪ್ರಸಿದ್ಧರಾದರು.

ಬುಸುಗುಡುತ್ತ ಬಂದವರು ಬಾಲ ಮಡಚಿದರು

ಅಂದಿನಿಂದ ಆಚಾರ್ಯಮಧ್ವರ ಜೀವನದ ಪ್ರತಿಕ್ಷಣವೂ ವೈದಿಕ ಧರ್ಮದ ಪ್ರಚಾರಕ್ಕಾಗಿ ಮೀಸಲಾಯಿತು. ಆಚಾರ್ಯರು ಯಾರನ್ನೂ ಕಾಲು ಕೆದಕಿ ವಾದಕ್ಕೆ ಕರೆಯುತ್ತಿರಲಿಲ್ಲ, ವಾದದ ಪೊಳ್ಳುತನ ಅವರಿಗೆ ಚೆನ್ನಾಗಿ ಗೊತ್ತು. ಆದರೆ ಯಾರಾದರೂ ತಾವಾಗಿಯೇ ಬಂದು ವಾದಕ್ಕೆ ನಿಂತರೆ ಆಚಾರ್ಯರು ಸುಮ್ಮನೆ ಕೂತವರಲ್ಲ. ಹೀಗೆ ಆಚಾರ್ಯರ ಬಳಿ ವಾದಕ್ಕೆಂದು ಹೆಡೆಯರಳಿ ಬುಸುಗುಡುತ್ತ ಬಂದವರು ಬಾಲ ಮಡಚಿಕೊಂಡು ಮರಳಿದರು ನೂರಾರು ಮಂದಿ.

ಮಕ್ಕಳಿಗೂ ಅರ್ಥವಾಯಿತು; ಪಂಡಿತರಿಗೆ ಅರ್ಥವಾಗಲಿಲ್ಲ

ಆಚಾರ್ಯಮಧ್ವರು ತಮ್ಮ ತತ್ವವಾದದ ಪ್ರಚಾರಕ್ಕಾಗಿ ದೇಶಾದ್ಯಂತ ಸಂಚರಿಸಿದರು. ಬಯಸಿ ಬಂದ ಮಂದಿಗೆಲ್ಲ ತತ್ವದ ತನಿರಸವನ್ನು ಉಣಿಸಿದರು. ಪಾಠ ಪ್ರವಚನಗಳಿಂದ ಶಿಷ್ಯರನ್ನು ತರಬೇತುಗೊಳಿಸಿದರು. ಮುಂದಿನ ಪೀಳಿಗೆಗಾಗಿ ನಾಲ್ವತ್ತು ಗ್ರಂಥಗಳನ್ನು ರಚಿಸಿದರು. ಎಂಥ ಅಚ್ಚರಿಯ ಗ್ರಂಥಗಳವು! ಮಕ್ಕಳಿಗೂ ಅರ್ಥವಾಗುವ, ಪಂಡಿತರಿಗೂ ಅರ್ಥವಾಗದ ಮಹಾಗ್ರಂಥಗಳು. **'ಬಾಲಸಂಘಮಪಿ ಬೋಧಯದ್ ಭೃಶಂ ದುರ್ನಿರೂಪವಚನಂ ಚ ಪಂಡಿತೈಃ'**.

ಧರ್ಮಜಾಗೃತಿಗಾಗಿ ಭಾರತಸಂಚಾರ

ಸನ್ಯಾಸಿಯಾದ ತರುಣದಲ್ಲೆ ಕನ್ಯಾಕುಮಾರಿ, ರಾಮೇಶ್ವರ, ಅನಂತಶಯನ, ಶ್ರೀರಂಗ ಇತ್ಯಾದಿ ದಕ್ಷಿಣದ ಎಲ್ಲ ಕ್ಷೇತ್ರಗಳನ್ನೂ ಸಂದರ್ಶಿಸಿದರು. ಒಟ್ಟು ಮೂರು ಬಾರಿ ಉತ್ತರದ ತುತ್ತ ತುದಿಯ ಬದರಿಯ ತನಕ ಸಂಚರಿಸಿ ಬಂದರು. ಉಡುಪಿಯಲ್ಲೆ ರಚಿಸಿದ ಪ್ರಥಮಕೃತಿ ಗೀತಾಭಾಷ್ಯವನ್ನು ಬದರಿಯಲ್ಲಿ ಗುರು ವೇದವ್ಯಾಸರಿಗೆ ಅರ್ಪಿಸಿದರು. ಅಲ್ಲೆ ನಿಂತು ಬ್ರಹ್ಮಸೂತ್ರಗಳಿಗೆ ಭಾಷ್ಯ ರಚಿಸಿದರು.

ಶಿಷ್ಯಸಂಪತ್ತು ಬೆಳೆಯಿತು

ಹೋದೆಡೆಯಲ್ಲೆಲ್ಲ ಆಚಾರ್ಯರ ಅದ್ಭುತ ಪ್ರವಚನವನ್ನು ಕೇಳಿ ಜನ ಮೈಮರೆತರು. ಅತ್ತ ಇಸ್ಲಾಂ ಧರ್ಮ ಭಾರತದ ಮೇಲೆ ದಾಳಿ ನಡೆಸಿತ್ತು. ಸ್ವಲ್ಪ ಮಟ್ಟಿಗೆ ಕ್ರೈಸ್ತ ಧರ್ಮವೂ ಕಾಲೂರಿತ್ತು. ಹೀಗೆ ವಿದೇಶೀಯ ಧರ್ಮಗಳ ಪ್ರಭಾವದಿಂದ ಭಾರತದಲ್ಲಿ ಒಂದು ಬಗೆಯ ಸಂದಿಗ್ಧತೆ ನೆಲಸಿತ್ತು. ಜತೆಗೆ ಭಾರತೀಯರಲ್ಲೇ ಹತ್ತುಹಲವು ಪಂಥಗಳ ಒಳಜಗಳದಿಂದ ಜನಸಾಮಾನ್ಯರಲ್ಲಿ ಒಂದು ಬಗೆಯ ಅತಂತ್ರಸ್ಥಿತಿ ನಿರ್ಮಾಣಗೊಂಡಿತ್ತು. ಈ ತಾತ್ವಿಕ ಅಭದ್ರತೆಯ ವಾತಾವರಣದಲ್ಲಿ ಆಚಾರ್ಯರು ದೇಶಾದ್ಯಂತ ಸಂಚರಿಸಿ ಜನತೆಯಲ್ಲಿ ಭರವಸೆ ಮೂಡಿಸಿ ದರು. ಆಚಾರ್ಯರ ವ್ಯಕ್ತಿತ್ವವನ್ನು ಕಂಡು ಜನ ತಲೆದೂಗಿದರು; ಪ್ರವಚನವನ್ನು ಕೇಳಿ ತಲೆಬಾಗಿದರು. ಹೋದೆಡೆಯಲ್ಲೆಲ್ಲ ಶಿಷ್ಯಸಂಪತ್ತು ಬೆಳೆಯಿತು.

ಗುರುವಿಗೂ ಸಿದ್ಧಾಂತದ ದೀಕ್ಷೆ

ಆಚಾರ್ಯರು ಉಡುಪಿಗೆ ಮರಳಿ ಬಂದಾಗ ತಮ್ಮ ಶಿಷ್ಯನ ಭಾಷ್ಯಕೃತಿಯನ್ನು ಗುರು ಅಚ್ಯುತಪ್ರಜ್ಞರೂ ಓದಿದ್ದರು. ಆಚಾರ್ಯ ರೊಡನೆ ಚರ್ಚೆ ನಡೆಸಿ ತಮ್ಮ ಸಂಶಯಗಳನ್ನು ಪರಿಹರಿಸಿಕೊಂಡು

ತಾವೂ ಆಚಾರ್ಯರ ಸಿದ್ಧಾಂತದ ಅನುಯಾಯಿಯಾದರು. ಗುರುವಿಗೇ ಸಿದ್ಧಾಂತದ ದೀಕ್ಷೆ ಕೊಟ್ಟ ಈ ಶಿಷ್ಯ ಜನತೆಯ ಹೃದಯದಲ್ಲಿ ಸ್ಥಿರವಾದ ಸ್ಥಾನವನ್ನು ಪಡೆದರು.


ಒಂಭತ್ತು ಸನ್ಯಾಸಿಶಿಷ್ಯರು

ಪದ್ಮನಾಭತೀರ್ಥರೆಂಬವರು ಆಚಾರ್ಯಮಧ್ವರ ಪ್ರಮುಖ ಶಿಷ್ಯರಲ್ಲೊಬ್ಬರು. ಅಲ್ಲದೆ ಇನ್ನೂ ಎಂಟು ಮಂದಿ ಆಚಾರ್ಯರ ಮುಖ್ಯ ಅಂತರಂಗ ಶಿಷ್ಯರಿದ್ದರು: ಹೃಷೀಕೇಶತೀರ್ಥ, ನರಹರಿತೀರ್ಥ (ಇವರನ್ನ ನರಸಿಂಹತೀರ್ಥ ಎಂದು ಕೂಡ ಕರೆಯುತ್ತಾರೆ), ಜನಾರ್ದನತೀರ್ಥ, ಉಪೇಂದ್ರತೀರ್ಥ, ವಾಮನತೀರ್ಥ, ವಿಷ್ಣು ತೀರ್ಥ, ರಾಮತೀರ್ಥ ಮತ್ತು ಅಧೋಕ್ಷಜತೀರ್ಥ. ಈ ಎಂಟು ಮಂದಿ ಯತಿಗಳೇ ಮುಂದೆ ಕೃಷ್ಣನ ಪೂಜೆಯ ಹೊಣೆ ಹೊತ್ತು ಉಡುಪಿಯ ಅಷ್ಟಮಠಗಳ ಮೂಲಪುರುಷರಾದರು. ಈ ಒಂಭತ್ತು ಮಂದಿಯಲ್ಲಿ ಹೃಷೀಕೇಶತೀರ್ಥರು ಆಚಾರ್ಯಮಧ್ವರ ಪ್ರಥಮಶಿಷ್ಯ. ಉಪಾಸನೆಯಲ್ಲಿ ಎಲ್ಲರಿಗಿಂತ ಎತ್ತರಕ್ಕೇರಿದವರು ವಿಷ್ಣುತೀರ್ಥರು.

ಹಡಗು ಒಡೆದು ಮುಳುಗಿತು

ಪ್ರಾಚೀನ ದಾಖಲೆಗಳಲ್ಲಿ ಕಂಡುಬರುವಂತೆ ಉಡುಪಿಯಲ್ಲಿ ಕೃಷ್ಣ ಪ್ರತಿಷ್ಠೆಯ ಕಥೆ ಹೀಗಿದೆ–

ದ್ವಾರಕೆಯಿಂದ ಹಡಗೊಂದು ಹೊರಟಿತ್ತು. ಸಾಮಾನಿನ ಜೊತೆಗೆ ಕೆಲವು ಗೋಪೀಚಂದನದ ಗಟ್ಟಿಗಳನ್ನು ಅದರಲ್ಲಿರಿಸಿದ್ದರು. ಉಡುಪಿ ಯಿಂದ ಮೂರು ಮೈಲಿ ಪಶ್ಚಿಮದಲ್ಲಿ ಮಲ್ಪೆಯ ಸಮುದ್ರತೀರದಲ್ಲಿ ಈ ಹಡಗು ಸಾಗುತ್ತಿದ್ದಾಗ ಗಾಳಿಯ ಸುಳಿಗೆ ಸಿಕ್ಕ ಹಾಯಿಹಡಗು ದಾರಿ ತಪ್ಪಿ ಬಂಡೆಯೊಂದಕ್ಕೆ ಬಡಿಯಿತು. ಹಡಗು ಒಡೆದು ಸಮುದ್ರತಳವನ್ನು ಸೇರಿತು.



ಕಡಲ ತೀರದಿಂದ ಉಡುಪಿಯ ಕಡೆಗೆ

ದ್ವಾರಕೆಯಿಂದ ಉಡುಪಿಗೆ ಬಂದ ಕೃಷ್ಣ

ಒಂದು ದಿನ ಧ್ಯಾನಯೋಗದಿಂದ ಎದ್ದ ಆಚಾರ್ಯರು ಇದ್ದಕ್ಕಿದ್ದಂತೆ ಮಲ್ಪೆಯತ್ತ ಹೊರಟರು. ಕಡಲಲ್ಲಿ ಮುಳುಗಿದ್ದ ಹಡಗಿನಲ್ಲಿ ಗೋಪೀಚಂದನದ ಗಡ್ಡೆಯೊಳಗೆ ಹುದುಗಿದ್ದ ಕೃಷ್ಣಮೂರ್ತಿ ಗೋಪೀಚಂದನವೆಲ್ಲ ಕರಗಿ ಲವಣಸಮುದ್ರದಲ್ಲಿ ಮಲಗಿದ್ದ. ಹೀಗೆ ಸಮುದ್ರತಳದಲ್ಲಿ ಮುಳುಗಿದ್ದ ಭಗವಂತನನ್ನು ಉಪ್ಪುನೀರಿನಿಂದ ತೆಗೆಸಿ ಉಡುಪಿಗೆ ಹೊತ್ತು ತಂದರು. ಜಲಾಧಿವಾಸದ ಅನಂತರ ತನ್ನ ಮಠದಲ್ಲಿ ಪ್ರತಿಷ್ಠಿಸಿದರು. ಹೀಗೆ ಹಲವು ವರ್ಷಗಳ ಕಾಲ ಶ್ರೀಕೃಷ್ಣನನ್ನು ಆಚಾರ್ಯರು ಸ್ವಯಂ ಪೂಜಿಸಿದರು.

ಹೀಗೆ ಏಳು ಶತಕಗಳಿಂದ ಶ್ರೀಕೃಷ್ಣ ಉಡುಪಿಯ ಅಧಿದೈವವಾಗಿ ನಾಡಿನ ಭಕ್ತರಿಗೆ-ಭಾವುಕರಿಗೆ ಅಭೀಷ್ಟಪ್ರದಾನದೀಕ್ಷಿತನಾಗಿ ಉಡುಪಿಯಲ್ಲಿ ನೆಲೆಸಿದ್ದಾನೆ. ಇದು ಅತ್ಯಂತ ಪುರಾತನ ಪುರಾವೆಗಳಲ್ಲಿ ದೊರೆಯುವ, ಸಂಪ್ರದಾಯಜ್ಞರು ಒಪ್ಪಿಕೊಂಡು ಬಂದ ಐತಿಹ್ಯ.

ವಿರೋಧಿಗಳು ತಿರುಗಿಬಿದ್ದರು

ಹೀಗೆ ಆಚಾರ್ಯಮಧ್ವರು ಉಡುಪಿಯನ್ನೆ ಕೇಂದ್ರವಾಗಿಟ್ಟುಕೊಂಡು ತಮ್ಮ ತತ್ವಪ್ರಸಾರದ ಕಾರ್ಯವನ್ನು ಕೈಗೊಂಡರು. ಆದರೆ ಅವರು ತಮ್ಮ ಈ ಧರ್ಮಪ್ರಚಾರಕಾರ್ಯದಲ್ಲಿ ಸಾಕಷ್ಟು ವಿರೋಧವನ್ನು ಎದುರಿಸಬೇಕಾಯಿತು. ಸಮಾಜ ನಿಂತ ನೀರಾಗಿ ಮಡುಗಟ್ಟಿದಾಗ ಅದಕ್ಕೆ ಹೊಸ ಚಾಲನೆಯನ್ನು ಕೊಡಲೆಂದು ಮಹಾಪುರುಷರು ಅವತರಿಸಿ ಬರುತ್ತಾರೆ. ಹೀಗೆ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ಕೈಹಾಕಿದ ಪ್ರತಿಯೊಬ್ಬರೂ ಜನಪ್ರಿಯತೆಯಂತೆಯೇ ಸಮಾಜವಿರೋಧವನ್ನೂ ಅನಿವಾರ್ಯವಾಗಿ ಕಟ್ಟಿಕೊಳ್ಳಬೇಕಾಗುತ್ತದೆ. ಆಚಾರ್ಯರು ಇದಕ್ಕೆ ಅಪವಾದವಾಗಿರಲಿಲ್ಲ.

ಯಾವ ಕುತಂತ್ರಕ್ಕೂ ಆಚಾರ್ಯರು ಮಣಿಯಲಿಲ್ಲ


ಅನೂಚಾನವಾಗಿ ನಡೆದುಬಂದ ಸಂಪ್ರದಾಯವನ್ನು ಇವರು ಹಾಳುಗೆಡವುತ್ತಿದ್ದಾರೆ ಎಂದು ಹಲವರು ಹುಯಿಲೆಬ್ಬಿಸಿದರು. ಆಚಾರ್ಯರನ್ನು ಶಾಸ್ತ್ರದ ಬಲದಿಂದ ಸೋಲಿಸುವುದು ಅಸಾಧ್ಯ-ವಾದಾಗ ಕೆಟ್ಟ ಮಾರ್ಗದ ಪ್ರಯತ್ನಗಳೂ ನಡೆದವು. ಅವರ ದಂಡವನ್ನು ಮುರಿಯುವ ಸಂಚು ನಡೆಯಿತು. ಜಟ್ಟಿಗಳಾದ ಕೊಡಿಂಜಾಡಿ ಸೋದರರಿಂದ ಅವರ ಕುತ್ತಿಗೆ ಹಿಚುಕಿ ಕೊಲ್ಲಿಸುವ ಪ್ರಯತ್ನ ನಡೆಯಿತು. ಅವರ ಬಗೆಗೆ ಅಪಪ್ರಚಾರವನ್ನು ಹಬ್ಬಿಸಲಾಯಿತು. ಆಚಾರ್ಯರು ಈ ಯಾವ ತಂತ್ರಕ್ಕೂ ಮಣಿಯಲಿಲ್ಲ, ಕೊನೆಗೂ ವಿರೋಧಿಗಳೇ ಸೋಲಬೇಕಾಯಿತು.

ಪುಸ್ತಕಗಳನ್ನೆ ಕದ್ದರು

ಆಚಾರ್ಯರ ಬಳಿ ಆ ಕಾಲದಲ್ಲೆ ಅಪೂರ್ವವಾದ ಪುಸ್ತಕಸಂಗ್ರಹ ವಿತ್ತು. ಕನ್ಯಾಕುಮಾರಿಯಿಂದ ಹಿಮಾಲಯದ ತನಕ ಸಂಚರಿಸಿ ಮೂಲ ಪಾಠದ ಶೋಧಕ್ಕಾಗಿ ತಾವು ಅನೇಕ ಅಪೂರ್ವಗ್ರಂಥಗಳನ್ನು ಪರಿಶೀಲಿಸಿ ದ್ದಾಗಿ ಅವರೇ ಹೇಳಿಕೊಂಡಿದ್ದಾರೆ. ಆ ತನಕ ಎಲ್ಲೂ ಉಪಲಬ್ಧವಿಲ್ಲದಿದ್ದ ಅನೇಕ ಪ್ರಾಚೀನಗ್ರಂಥಗಳನ್ನು ಆವರು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿ ದ್ದಾರೆ. ಆಚಾರ್ಯರ ದೊಡ್ಡ ಸಂಪತ್ತು ಎಂದರೆ ಅವರ ಬಳಿಯಿದ್ದ ಈ ಪುಸ್ತಕ ಭಂಡಾರವೆ ಆಗಿತ್ತು. ಪದ್ಮತೀರ್ಥ ಎಂಬ ಮಾಯಾವಾದದ ಯತಿಯೊಬ್ಬರು ಅವರ ಗ್ರಂಥಗಳನ್ನೆ ಅಪಹರಿಸಿದರು.

ಜಯಸಿಂಹನ ನಾಡಿನಲ್ಲಿ ಆಚಾರ್ಯರು

ತುಳುನಾಡಿನ ದೊರೆ ಜಯಸಿಂಹನಿಗೆ ತನ್ನ ರಾಜಧಾನಿ ಕಾಸರ-ಗೋಡಿನಲ್ಲಿ ನಡೆದ ಈ ಕಳವಿನ ಸುದ್ದಿ ಮುಟ್ಟಿತು. ಈ ಅಕೃತ್ಯಕ್ಕಾಗಿ ಆತ ಮರುಗಿದ. ಆಚಾರ್ಯರಿಗೆ ಮರಳಿಸಲೆಂದು ಪದ್ಮತೀರ್ಥರಿಂದ ಆತ ಪುಸ್ತಕಗಳನ್ನು ಸ್ವಾಧೀನಪಡಿಸಿಕೊಂಡ. ಆಚಾರ್ಯರಿಗೆ ಸುದ್ದಿ ತಿಳಿಸಿ ರಾಜ್ಯಕ್ಕೆ ಬರಬೇಕೆಂದು ಬೇಡಿಕೊಂಡ.



ತ್ರಿವಿಕ್ರಮಪಂಡಿತರ ಜತೆಗೆ ಏಳೆಂಟು ದಿನ ನಡೆದ ಐತಿಹಾಸಿಕ ವಾದ

ಆಚಾರ್ಯರು ಕಾಸರಗೋಡಿಗೆ ಬಂದರು. ತನ್ನ ರಾಜಧಾನಿಗೆ ಬಂದ ಆಚಾರ್ಯರನ್ನು ಜಯಸಿಂಹ ರಾಜವೈಭವದಿಂದ ಸ್ವಾಗತಿಸಿದ.

ತಾನು ಮೇನೆಯಿಂದ ಮೊದಲೇ ಇಳಿದು ಆಚಾರ್ಯರ ಬಳಿಗೆ ನಡೆದು ಬಂದ. ಇಕ್ಕೆಲದಲ್ಲಿ ಸೈನಿಕರು ಸರಿದು ನಿಂತರು. ತಲೆಬಾಗಿ ನಿಂತ ದೊರೆಯನ್ನು ಹರಸಿದ ಆಚಾರ್ಯರು ಅವನ ಜತೆಗೆ ವಿಷ್ಣು ಮಂಗಲದೇವಾಲಯದತ್ತ ತೆರಳಿದರು. ಇಡಿಯ ರಾಜಧಾನಿಯ ಜನತೆ ಈ ಅಪೂರ್ವ ದೃಶ್ಯವನ್ನು ಕಾಣಲು ಬೀದಿಗಳಲ್ಲಿ ಸಂದಣಿಸಿತ್ತು.

ಕಂಡ ಕಣ್ಣು ಸಾರ್ಥಕ

ಮುಂದುಗಡೆ ಆಚಾರ್ಯರೇ ರಚಿಸಿದ ದೇವರ ಸ್ತೋತ್ರಗಳನ್ನು ಹಾಡುತ್ತ ಕುಣಿಯುತ್ತ ಬರುತ್ತಿರುವ ಶಿಷ್ಯವೃಂದ. ಹಿಂದೆ ಕೈಮುಗಿದು ಬರುತ್ತಿರುವ ಮಹಾರಾಜನ ಜತೆಗೆ ಆಚಾರ್ಯಮಧ್ವರು. ನೋಡಿದ ಜನ ಬೆರಗಾದರು.

ಕಣ್ಣು ಸವಿದಷ್ಟೂ ತಣಿಯದ, ಆದರೆ ಮಾತು ವಿವರಿಸಲಾಗದ ಚೆಲುವು. ಇಡಿಯ ಗುಂಪಿನಲ್ಲೆ ಪ್ರತ್ಯೇಕವಾಗಿ ಎದ್ದು ಕಾಣುವ ವ್ಯಕ್ತಿತ್ವ ಗಂಭೀರವಾದ ಬೀಸುಗಾಲಿನ ನಡೆ. ಲಕ್ಷಣಶಾಸ್ತ್ರಕ್ಕೆ ತಕ್ಕಂತೆ ಶಿಲ್ಪಿ ಕಡೆದಿಟ್ಟ ಹಾಗೆ ಮಾಟವಾದ ಮೈಕಟ್ಟು, ಉಬ್ಬಿದ ಎದೆಯ ಮೇಲೆ ಹರವಾದ ಹೆಗಲು. ಆಜಾನುಬಾಹು. ಬೆಳದಿಂಗಳಿನಂತೆ ತಂಪೆರಚುವ ಮುಗುಳು ನಗೆಯ ಚೆಲು ಮೋರೆ. ಇಂಥ ರೂಪವನ್ನು ಕಂಡ ಕಣ್ಣು ಸಾರ್ಥಕ ವಾಯಿತು; ಬಾಳು ಪಾವನವಾಯಿತು.

ಸೋತು ಗೆದ್ದ ಪೆಜತ್ತಾಯರು

ಪೆಜತ್ತಾಯಕುಲದ ತ್ರಿವಿಕ್ರಮಪಂಡಿತ ಎಂಬವರು ಆಚಾರ್ಯರ ಗ್ರಂಥಪಾಲರಾದ ಶಂಕರಪಂಡಿತರ ಸೋದರರು. ಅವರಂಥ ಪಂಡಿತರು ಆ ಪ್ರಾಂತದಲ್ಲೆ ಇನ್ನೊಬ್ಬರಿರಲಿಲ್ಲ.

ತ್ರಿವಿಕ್ರಮಪಂಡಿತರು ಆಚಾರ್ಯರೊಡನೆ ವಾದಕ್ಕಿಳಿದು ಪ್ರಶ್ನೆಗಳ ಸುರಿಮಳೆಯನ್ನೆ ಸುರಿಸಿದರು. ಆಚಾರ್ಯರು ಶಾಂತರಾಗಿ ಮುಗುಳು ನಗುತ್ತಲೇ ಒಂದೊಂದೆ ಪ್ರಶ್ನೆಗಳನ್ನು ಉತ್ತರಿಸಿದರು. ಒಂದಲ್ಲ, ಎರಡಲ್ಲ, ಏಳೆಂಟು ದಿನಗಳ ಕಾಲ ವಾದ ನಡೆಯಿತು. (ಏಳು+ಎಂಟು = ಹದಿನೈದು ದಿನಗಳ ಕಾಲ ಎಂದು ಅನಂತರ ಬೆಳೆದು ಬಂದ ತಪ್ಪು ಕಥೆ.) ಕೊನೆಗೂ ತ್ರಿವಿಕ್ರಮಪಂಡಿತರು ಸಂಶಯಗಳನ್ನೆಲ್ಲ ಪರಿಹರಿಸಿ ಕೊಂಡು ಆಚಾರ್ಯರ ಅಂತರಂಗಶಿಷ್ಯರಾದರು.

ತ್ರಿವಿಕ್ರಮಪಂಡಿತರಿಗಾಗಿ ಆಚಾರ್ಯರು ನೀಡಿದ ಪ್ರವಚನ ತ್ರಿವಿಕ್ರಮಪಂಡಿತರದಷ್ಟೆ ಅಲ್ಲ; ಇಡಿಯ ಜನತೆಯ ಕಣ್ಣನ್ನೇ ತೆರೆಯಿಸಿತು.

'ಲೋಕಸೇವೆಯಿಂದ ಮುಕ್ತಿ'

'ಗುಣಪೂರ್ಣನಾದ ಭಗವಂತನೊಬ್ಬನಿದ್ದಾನೆ. ಅವನನ್ನು 'ನಾರಾಯಣ' ಎಂದು ಹೆಸರಿಸುತ್ತಾರೆ. ಈಶ್ವರ, ಬ್ರಹ್ಮ, ವಿಷ್ಣು ಇವೆಲ್ಲವೂ ಅವನದೇ ಹೆಸರು. ದೇವರನ್ನು ಯಾವ ಹೆಸರಿನಿಂದ ಕರೆದರೂ ಸರಿಯೆ.

'ಈ ಜೀವ ಒಂದು ಪ್ರತಿಬಿಂಬ. ಭಗವಂತ ಅದರ ಬಿಂಬ. ಪ್ರತಿಬಿಂಬದ ಮೂಲಕವೆ ಬಿಂಬದ ಅರಿವು. ಜೀವದ ಅರಿವಿಲ್ಲದೆ ದೇವನ ಅರಿವು ಸಾಧ್ಯವಿಲ್ಲ. ಮೊದಲು 'ನಾನು' ತಿಳಿಯಬೇಕು. ಆಗ 'ಅವನು' ತಿಳಿಯಲ್ಪಡುತ್ತಾನೆ.

'ವೇದಗಳು ಮೂಲ ಪ್ರಮಾಣಗಳು. ತತ್ವವನ್ನು ತಿಳಿಸಲೆಂದು ತರ್ಕಕ್ಕೆ ಶರಣಾಗಬೇಡ. ತರ್ಕ ದಾರಿ ತಪ್ಪಿಸುವ ಭಯವುಂಟು. ಸತ್ಯದ ಅರಿವಿಗಾಗಿ ವೇದಗಳಿಗೇ ಶರಣಾಗಬೇಕು.

'ಕರ್ತವ್ಯಕರ್ಮವನ್ನು ಎಂದೂ ಮರೆಯಬೇಡ. ನಿನಗಿಂತ ಹೆಚ್ಚು ಕಷ್ಟದಲ್ಲಿರುವವರ ಸೇವೆಯೆ ನಿಜವಾದ ಕರ್ತವ್ಯಕರ್ಮ. ನೀನು

ಭಗವಂತನ ರಾಜ್ಯದ ಪ್ರಜೆಯಾದುದಕ್ಕಾಗಿ ಅವನಿಗೆ ಸಲ್ಲಿಸಬೇಕಾದ ಕಂದಾಯವೆ ಈ ಲೋಕಸೇವೆ.

'ಈ ಜಗತ್ತು ಭಗವಂತನ ಅದ್ಭುತ ಸೃಷ್ಟಿ. ಭಗವಂತನ ಹಿರಿಮೆಯನ್ನು ಅರಿತುಕೊ. ನಿನ್ನ ಸೀಮಿತತೆಯನ್ನೂ ಅರಿತುಕೊ. ಆ ಮಹಾಶಕ್ತಿಗೆ ಶರಣಾಗು. ಬಾಳಿನ ಬಂಧನವನ್ನು ದಾಟಲು ಇದೊಂದೇ ದಾರಿ.' ಹೀಗೆ ಸಾಗಿತ್ತು ಆಚಾರ್ಯರ ಪ್ರವಚನ.

ಗ್ರಂಥರಚನೆ

ತನ್ನ ತತ್ವವಾದವನ್ನು ಜನರಿಗೆ ತಿಳಿಯಪಡಿಸಲು ಆಚಾರ್ಯರು 'ಪ್ರಸ್ಥಾನತ್ರಯ'(ಗೀತೆ, ದಶೋಪನಿಷತ್ತುಗಳು ಮತ್ತು ಬ್ರಹ್ಮಸೂತ್ರ)ಗಳಿಗೆ ಭಾಷ್ಯ ರಚಿಸಿದರು. ಮಹಾಭಾರತ, ಪುರಾಣಗಳ ತಾತ್ವಿಕ ವಿಮರ್ಶೆಗಾಗಿ 'ಶ್ರೀಮಹಾಭಾರತತಾತ್ಪರ್ಯನಿರ್ಣಯ' ರಚಿಸಿದರು. ಭಾಗವತಕ್ಕೆ ತಾತ್ಪರ್ಯನಿರ್ಣಯವೆಂಬ ಅಪೂರ್ವವಾದ ಟೀಕೆ ರಚಿಸಿದರು. ಋಗ್ವೇದದ ನಾಲ್ವತ್ತು ಸೂಕ್ತಗಳಿಗೆ ಭಾಷ್ಯ ರಚಿಸಿದರು. ಯಮಕಕಾವ್ಯವೊಂದನ್ನೂ, ಹಾಡುಗಬ್ಬಗಳನ್ನೂ ರಚಿಸಿದರು. ಪುರಾಣಶ್ಲೋಕಗಳನ್ನು ಸಂಗ್ರಹಿಸಿ 'ಕೃಷ್ಣಾಮೃತಮಹಾರ್ಣವ'ವನ್ನು ರಚಿಸಿದರು. ವಾಸ್ತುಶಿಲ್ಪ-ಪ್ರತಿಮಾಶಿಲ್ಪದ ಅಪೂರ್ವವಿವರಗಳನ್ನೊಳಗೊಂಡ 'ತಂತ್ರಸಾರ ಸಂಗ್ರಹ'ವನ್ನು ರಚಿಸಿದರು. ಅಪೂರ್ವಗಣಿತಗ್ರಂಥ 'ತಿಥಿನಿರ್ಣಯ'ವನ್ನೂ ರಚಿಸಿದರು. ಇನ್ನೂ ಅನೇಕ ಗ್ರಂಥಗಳನ್ನು ರಚಿಸಿದರು. ಇಷ್ಟೆ ಅಲ್ಲ, ಸಂಗೀತದಲ್ಲೂ ಅವರ ವಿದ್ವತ್ತು ಅಸಾಧಾರಣವಾಗಿತ್ತು. ಶ್ರೇಷ್ಠ ಗೇಯಕಾವ್ಯವಾದ ದ್ವಾದಶಸ್ತೋತ್ರಗಳ ರಚನೆ ಇದಕ್ಕೆ ಪುರಾವೆ. ಇಷ್ಟೇ ಅಲ್ಲದೆ ಅವರ ಜೀವನದ ಒಂದು ಘಟನೆಯೂ ಇದಕ್ಕೆ ಸಾಕ್ಷಿ ಹೇಳುತ್ತದೆ.

ಹಾಡು ಕೇಳಿ ಬಳ್ಳಿ ಹೂಬಿಟ್ಟಿತು

ಗೋವೆಯಿಂದ ಹೊರಟ ಆಚಾರ್ಯರು ಪಶುಪೆ ಎಂಬಲ್ಲಿ ತಂಗಿದ್ದರು. ಆಚಾರ್ಯರ ಕಂಠಮಾಧುರ್ಯ ಸಂಗೀತಪಾಂಡಿತ್ಯಗಳ ಬಗೆಗೆ ಕೇಳಿ ತಿಳಿದಿದ್ದ ಜನ ಅವರ ಸಂಗೀತವನ್ನ ಕೇಳಬಯಸಿದರು. ಜನರ ಬಯಕೆಯಂತೆ ಆಚಾರ್ಯರು ಹಾಡತೊಡಗಿದರು. ಕೇಳಿದ ಜನ ಮೈಮರೆಯುವಂತಹ ಮಾಧುರ್ಯ. 'ಗಂಡಸರು ಇಷ್ಟು ಮಧುರವಾಗಿ ಹಾಡುತ್ತಾರೆ' ಎಂದು ನಂಬಲು ಆಗದಷ್ಟು ಮಾಧುರ್ಯ. ಆ ಹಾಡಿನ ಆಕರ್ಷಣೆಗೆ ಅಲ್ಲೆ ಪಕ್ಕದಲ್ಲಿದ್ದ ಬಾಡಿದ ಗಿಡವೊಂದು ಅರಳಿ ಹೂಬಿಟ್ಟಿತು.

ಆಚಾರ್ಯರು ಅನುವ್ಯಾಖ್ಯಾನದಲ್ಲಿ ಸಾರಿದ್ದರು: **'ಗೀತಾತ್ ಪುಷ್ಪಫಲಾವಾಪ್ತಿಃ'** (ಗಿಡ-ಮರಗಳಿಗೆ ಹಾಡು ಕೇಳಿಸಿದರೆ ಅವು ಸಂತಸದಿಂದ ಹೂ-ಹಣ್ಣು ಬಿಡುತ್ತವೆ.) ಆಚಾರ್ಯರು ತಾನೇ ಹಾಡಿ ತನ್ನ ಮಾತಿನ ಯಥಾರ್ಥತೆಯನ್ನು ತೋರಿಸಿಕೊಟ್ಟರು.

ಆಚಾರ್ಯರು ಕರ್ಣಾಟಕಸಂಗೀತಕ್ಕೆ ಖಚಿತರೂಪ ಕೊಟ್ಟ ಮೂಲಪುರುಷ. ಅಷ್ಟೆ ಅಲ್ಲ: ಶ್ರೀ ನರಹರಿತೀರ್ಥರ ಮೂಲಕ ಯಕ್ಷಗಾನ-ಬಯಲಾಟಗಳನ್ನು ಆಚರಣೆಗೆ ತಂದವರೂ ಆಚಾರ್ಯ ಮಧ್ವರೆ.

ಆಚಾರ್ಯರದ್ದು ಗಂಧರ್ವರೂ ಕೊಂಡಾಡುವ ಗಂಧರ್ವಗಾನ. ಯಕ್ಷರೂ ತಲೆದೂಗುವ ಯಕ್ಷಗಾನ.

ಕೊನೆಯ ಬಾರಿ ಬದರಿಗೆ

ಹೀಗೆ ಆಚಾರ್ಯರು ತಮ್ಮ ಜೀವನದುದ್ದಕ್ಕೂ ಭಗವಂತನ ಗುಣಗಾನವನ್ನು ಮಾಡಿದರು. ಈ ಕಾರ್ಯಕ್ಕೆ ಎದುರಾದ ಅಡ್ಡಿ-ಆತಂಕಗಳನ್ನು ಧೀರತೆಯಿಂದ ಎದುರಿಸಿದರು. ಚಿಕ್ಕ ಹುಡುಗನಾಗಿದ್ದಾಗಲೆ

ತಮ್ಮನ್ನು ಕಡಿಯಲೆಂದು ಬಂದ ಕಾಳಿಂಗ ಸರ್ಪವನ್ನು ಕಾಲಲ್ಲಿ ಹೊಸಕಿ ಹಾಕಿದ ಆಚಾರ್ಯರಿಗೆ ಭಯವೆಂದರೇನೆಂದು ತಿಳಿಯದು. ಅವರು ಯಾವ ಆತಂಕಕ್ಕೂ ಎದೆಗೆಡಲಿಲ್ಲ. ಎಂದೂ ಇನ್ನೊಬ್ಬರಿಗೆ ತಲೆಬಾಗ ಲಿಲ್ಲ. ತಮ್ಮ ಜೀವನದ ಉದ್ದೇಶ ಅವರಿಗೆ ಸ್ಪುಟವಾಗಿತ್ತು. ಅದನ್ನು ಸಾಧಿಸುವ ಬಗೆಯೂ ತಿಳಿದಿತ್ತು. ತಾವು ಧೀರಸನ್ನ್ಯಾಸಿಯಾಗಿ ಬದುಕಿ ದರು. ತನ್ನ ಬಳಿ ಬಂದವರಿಗೆಲ್ಲ ಭರವಸೆಯನ್ನು ತುಂಬಿದರು.

79ವರ್ಷಗಳ ಕಾಲ ಇಂಥ ಸಾರ್ಥಕ ಬದುಕನ್ನು ಬಾಳಿ ಪಿಂಗಳ ಸಂವತ್ಸರದ (ಕ್ರಿ.ಶ. 1317) ಮಾಘಶುದ್ಧನವಮಿಯಂದು ಎಲ್ಲ ಶಿಷ್ಯ ರನ್ನು ಬೀಳ್ಕೊಟ್ಟು ಬದರಿಗೆಂದು ತೆರಳಿದರು. ಅನಂತರ ಅವರನ್ನು ಕಂಡ ವರಿಲ್ಲ. ಇಂದಿಗೂ ಈ ದಿನವನ್ನು 'ಮಧ್ವನವಮಿ' ಎಂದು ಅವರ ಪುಣ್ಯ ತಿಥಿಯನ್ನಾಗಿ ಆಚರಿಸಲಾಗುತ್ತಿದೆ.

★★★

ಆಚಾರ್ಯಮಧ್ವರ ಕಂದುಕಸ್ತುತಿ


ಆಚಾರ್ಯಮಧ್ವರು ಪುಟ್ಟ ಬಾಲಕ ವಾಸುದೇವನಾಗಿದ್ದಾಗ, ಪ್ರಾಯಃ ಚೆಂಡಾಟವಾಡುತ್ತ, ಅದರ ತಾಳಕ್ಕೆ ತಕ್ಕಂತೆ, ರಚಿಸಿದ ರಮ್ಯ ಕೃತಿ: ಕಂದುಕಸ್ತುತಿ; ಚೆಂಡಾಟದ ಹಾಡು.

ಒಬ್ಬ ಆಚಾರ್ಯ ಪುರುಷರು ಮಕ್ಕಳಿಗಾಗಿ ರಚಿಸಿದ ಮೊದಲ ಶಿಶುಸಾಹಿತ್ಯ ಎನ್ನುವುದು ಇದರ ಹೆಗ್ಗಳಿಕೆ. ಮಕ್ಕಳ ಆಟದಲ್ಲೂ ದೇವರ ಸ್ಮರಣೆ ಸಂಗಾತಿಯಾಗಿರಲಿ ಎನ್ನುವ ಎಚ್ಚರ ನೀಡುವ ರಮ್ಯ ಕೃತಿ ಇದು.

ಅಂಬರ-ಗಂಗಾ-ಚುಂಬಿತ-ಪಾದಃ
ಪದತಲ-ವಿದಲಿತ-ಗುರುತರ-ಶಕಟಃ ।
ಕಾಳಿಯ-ನಾಗ-ಕ್ಷ್ವೇಳ-ನಿಹಂತಾ
ಸರಸಿಜ-ನವದಲ-ವಿಕಸಿತ-ನಯನಃ ॥ ೧ ॥

ಕಾಲಘನಾಲೀ-ಕರ್ಬುರ-ಕಾಯಃ
ಶರಶತ-ಶಕಲಿತ-ರಿಪುಶತ-ನಿವಹಃ ।
ಸಂತತಮಸ್ಮಾನ್ ಪಾತು ಮುರಾರಿಃ
ಸತತಗ-ಸಮಜವ-ಖಗಪತಿ-ನಿರತಃ ॥ ೨ ॥

★★★



ಚೆಂಡಾಟವಾಡಿದನು ನಮ್ಮ ವಾಸುದೇವ

ಚೆಂಡಾಟದ ಹಾಡು

ಕಂದುಕಸ್ತುತಿಃ - ಕನ್ನಡದ ಕನ್ನಡಿಯಲ್ಲಿ

[ಮೊದಲ ಸಾಲು ಒಬ್ಬ ಹಾಡಬೇಕು. ಎರಡನೆಯ ಸಾಲನ್ನು ಎಲ್ಲರೂ ಸೇರಿ ಹಾಡಬೇಕು.]


ಆಗಸದ ಗಂಗೆ ಮುದ್ದಿಸಿದ ತಿರುಪಾದ
ನಮ್ಮ ಕಿಟ್ಟನ ಪಾದ ।
ದೊಡ್ಡ ಗಾಡಿಯನೊದ್ದು ಜಾಡಿಸಿದ ಕಿರುಪಾದ
ನಮ್ಮ ಕಿಟ್ಟನ ಪಾದ ॥ ೧ ॥

ಕಾಳಿಯನ ತಲೆ ಮೆಟ್ಟಿ ನಂಜು ಹೀರಿದನಣ್ಣ
ನಮ್ಮ ಕಿಟ್ಟಪ್ಪ ಕಣ್ಣ ।
ತಾವರೆಯ ಎಳೆ ಎಸಳಿನಂತರಳುಗಣ್ಣ
ನಮ್ಮ ಕಿಟ್ಟ ಕಣಣ್ಣ ॥ ೨ ॥

ಕಪ್ಪು ಮೋಡಗಳಂತೆ ಒಪ್ಪ ಮೈಬಣ್ಣ
ನಮ್ಮ ಕಿಟ್ಟನ ಬಣ್ಣ ।
ಕೂರ್ಗಣೆಗೆ ರಕ್ಕಸರ ಪಡೆ ಸೋತು ಸುಣ್ಣ
ನಮ್ಮ ಕಿಟ್ಟ ಕಣಣ್ಣ ॥ ೩ ॥

ಅನುಗಾಲ ಪಾಲಿಸಲಿ ನಮ್ಮನು ಮುರಾರಿ
ನಮ್ಮ ಕಿಟ್ಟ ಪುಢಾರಿ ।
ಗಾಳಿಯಂತೋಡುವಾ ಗರುಡನೇ ಗಾಡಿ
ನಮ್ಮ ಕಿಟ್ಟ ಕಿಲಾಡಿ ॥ ೪ ॥

★★★



ಇವ ಹನುಮ, ಇವ ಭೀಮ, ಇವನೆ ಮಧ್ವ

ಮಧ್ವ-ಲಾವಣಿ

ಕೇಳಿರಿ ಕೇಳಿರಿ ಚಂದದ ಕಥೆಯ
ಉಡುಪಿಯ ಕೃಷ್ಣನ ತಂದನ ಕಥೆಯ ॥ ಪಲ್ಲವಿ ॥

ಕೊಡಬೇಡಿ ಕೊಡಬೇಡಿ ಒಂದು ಚಿಕ್ಕಾಸು
ಹಾಳು ಮಾಡದಿರಿ ಬಾಳಿನೊಂದೊಂದು ತಾಸು ॥ ಅನುಪ. ॥

ದೇವರ ಆಣತಿ ತಲೆಯಲಿ ಹೊತ್ತು
ಅಂಜನೆಯುದರದಿ ಹುಟ್ಟಿತು ಕೂಸು ।
ಬಾಲದ ಬೆಂಕಿಯ ರಿಂಗಣದಿಂದ
ಲಂಕಾಪಟ್ಟಣ ಸುಟ್ಟಿತು ಕೂಸು ॥ ೧ ॥

ರಕ್ಕಸರೆಲ್ಲಾ ಬೆಕ್ಕಸ ಬೆರಗು
ರಾವಣನೆದೆಗೇ ಗುದ್ದಿತು ಕೂಸು ।
ಕಪಿಗಳ ಕಿಲಕಿಲ ಕೇಳಿಸದಾಗ
ಗಂಧಮಾದನವನೆತ್ತಿತು ಕೂಸು ॥ ೨ ॥

ಹಾರುವನಾ ಮನೆ-ಮಕ್ಕಳನುಳಿಸಲು
ಬಂಡಿ ಅನ್ನವನುಂಡಿತು ಕೂಸು ।
ಅರಗಿನ ಮನೆಯನು ಬೆಂಕಿಯಲಿರಿಸಿ
ಪಾಂಚಾಲಿಯ ಕೈ ಹಿಡಿಯಿತು ಕೂಸು ॥ ೩ ॥

ತನ್ನರಗಿಣಿಗೇ ಹೂವನು ತರಲು
ಮಣಿಮಂತನ ತಲೆ ಮಣಿಸಿತು ಕೂಸು ।
ಏಳೂ ಹನ್ನೊಂದೆದುರೆದುರಾಗಲು
ಕುರುಡನ ಮಕ್ಕಳ ಮುಗಿಸಿತು ಕೂಸು ॥ ೪ ॥

ದೇವರ ಆಣತಿ ತಲೆಯಲಿ ಹೊತ್ತು
ಪಾಜಕದಲಿ ಮರುಹುಟ್ಟಿತು ಕೂಸು ।
ಬೆಂದ ಹುರುಳಿಯನ್ನಕ್ಕ ತಿನ್ನಿಸಲು
ಗಕ್ಕನೆ ಮುಕ್ಕಿತ್ತದನೂ ಕೂಸು ॥ ೫ ॥

ಹಬ್ಬದ ಮನೆಯಲಿ ಕಣ್ಮರೆಯಾಗಿ
ಕಾನಂಗಿಯ ಗುಡಿ ಸೇರಿತು ಕೂಸು ।
ಬನ್ನಂಜೆಯ ಶಿವ ಜತೆಗೂಡಿರಲು
ಪನ್ನಂಗಶಯನನಿಗೆರಗಿತು ಕೂಸು ॥ ೬ ॥

ಕುಂಜಾರಮ್ಮನ ಮುದ್ದಿನ ಕಂದ
ಆನಂದದ ಹೊಳೆ ಹರಿಸಿತು ಕೂಸು ।
ನೇಯಂಪಳ್ಳಿಯ ದೇವಳದಲ್ಲಿ
ಶಿವಪುರಾಣಿಕನ ತಿದ್ದಿತು ಕೂಸು ॥ ೭ ॥

ತಂದೆ ಮರೆತೊಂದು ಮರದ ಹೆಸರನ್ನು
ಥಟ್ಟನೇ ನೆನಪಿಸಿತು ದಿಟ್ಟ ಕೂಸು ।
ಕಾಣುವ ಕಣ್ಣಿಗೆ ಸಂತಸವೀಯುತ
ಯಜ್ಞೋಪವೀತವ ಧರಿಸಿತು ಕೂಸು ॥ ೮ ॥

ಮರೆಯಲಿ ಹೊಂಚುತ ಭುಸುಗುಡುತಿದ್ದ
ಘಟಸರ್ಪದ ತಲೆ ಚಚ್ಚಿತು ಕೂಸು ।
ತೋಟದ ಮನೆಯಲಿ ಪಾಠವ ಕೇಳುತ
ಗುರುವಿಗೆ ಪಾಠವ ಕಲಿಸಿತು ಕೂಸು ॥ ೯ ॥

ಲೋಕಕೆಲ್ಲ ತತ್ವಾಮೃತ ಹಂಚಲು
ಸನ್ಯಾಸಿಯಾಗಲು ಬಯಸಿತು ಕೂಸು ।
ಅಚ್ಯುತಪ್ರಜ್ಞರ ಪುಣ್ಯದ ಪಾಕ
ದಂಡ ಕಮಂಡಲು ಹಿಡಿಯಿತು ಕೂಸು ॥ ೧೦ ॥

ಹದಿವರಯದಲೇ ಕಾವಿಯನುಟ್ಟು
ಗಂಗೆಯನುಡುಪಿಗೆ ಬರಿಸಿತು ಕೂಸು ।
ವಾದಿಸಿಂಹನಾ ಶುಷ್ಕತರ್ಕಗಳ
ಮಗ್ಗಲು ಮುರಿಯಿತು ಸಗ್ಗದ ಕೂಸು ॥ ೧೧ ॥

ಬೌದ್ಧಕುಲಗುರು ಬುದ್ಧಿಸಾಗರನ
ಪೆದ್ದನಾಗಿಸಿತು ಗೆದ್ದು ಕೂಸು ।
ಆನಂದತೀರ್ಥರೆಂಬಭಿಧಾನ ಪಡೆದು
ವೇದಾಂತರಾಜ್ಯವನಾಳಿತು ಕೂಸು ॥ ೧೨ ॥

ಅನಂತಶಯನನ ಪದಗಳಿಗೆರಗಿ
ಸೂತ್ರಪ್ರವಚನ ಗೈಯಿತು ಕೂಸು ।
ತತ್ವಾಮೃತವನು ಎಲ್ಲರಿಗುಣಿಸುತ
ಶ್ರೀರಂಗನಾಥನಿಗೆರಗಿತು ಕೂಸು ॥ ೧೩ ॥

ಸಹಸ್ರನಾಮಕೆ ನೂರರ್ಥವೆನ್ನುತ
ಕವಿಗಳಿಗಚ್ಚರಿ ಬರಿಸಿತು ಕೂಸು ।
ಶ್ರೀಮದ್ಗೀತಾಭಾಷ್ಯವ ರಚಿಸಿ
ಬದರೀಶನ ಬಳಿ ಪಠಿಸಿತು ಕೂಸು ॥ ೧೪ ॥

ಬಾದರಾಯಣನ ಕಾಣಲಿಕೆಂದು
ವ್ಯಾಸಾಶ್ರಮಕೇ ತೆರಳಿತು ಕೂಸು ।
ನಾರಾಯಣನೇ ಹರಸುತಲಿತ್ತ
ಚಕ್ರಾಂಕಿತಶಿಲೆ ಪಡೆಯಿತು ಕೂಸು ॥ ೧೫ ॥

ಬಾದರಾಯಣನ ನಾದಿರಾಯಣನ
ಹರಕೆಯ ಹೊತ್ತು ಮರಳಿತು ಕೂಸು ।
ಸಕಲ ಶಾಸ್ತ್ರಗಳ ಕಡೆದೂ ಕಡೆದೂ
ಸೂತ್ರಕೆ ಭಾಷ್ಯವ ರಚಿಸಿತು ಕೂಸು ॥ ೧೬ ॥

ಕಾಲಿಗೆರಗಿದಾ ಶೋಭನಭಟ್ಟರ
ಪಾಲಿಗೆ ಕಲ್ಪದ್ರುಮವೀ ಕೂಸು ।
ಅಚ್ಯುತಪ್ರಜ್ಞರ ಒಳಗಣ್ ತೆರೆಸಿ
ಚಕ್ರಶಂಖಗಳನೊತ್ತಿತು ಕೂಸು ॥ ೧೭ ॥

ಹುಟ್ಟೂರಿನಿಂದ ಉಡುಪಿಗೆ ಬಂದ
ಕೃಷ್ಣನ ಕಡಲಿಂದೆತ್ತಿತು ಕೂಸು ।
ಒಲಿದು ಬಂದ ಆನಂದಕಂದನನು
ಉಡುಪಿಯಲ್ಲಿ ನೆಲೆಗೊಳಿಸಿತು ಕೂಸು ॥ ೧೮ ॥

ಈಶ್ವರದೇವನ ಅಗೆಯಲು ಹಚ್ಚಿ
ಕೆರೆಯಲಿ ನೀರನು ಬರಿಸಿತು ಕೂಸು ।
ದೋಣಿಯೆ ಇಲ್ಲದೆ ಗಂಗೆಯ ದಾಟಿ
ಮುಸಲರ ನಾಡಿಗೆ ನಡೆಯಿತು ಕೂಸು ॥ ೧೯ ॥

ಅಲ್ಲಾ ಎನ್ನುವ ಮುಲ್ಲಾಗಳಿಗೂ
ಎಲ್ಲಾ ಹರಿ-ಹೆಸರೆಂದಿತು ಕೂಸು ।
ಮೆಚ್ಚಿದ ನವಾಬ ಜಹಗೀರಿತ್ತರೆ
ಮುಟ್ಟದೆ ಬದರಿಗೆ ತೆರಳಿತು ಕೂಸು ॥ ೨೦ ॥

ದರೋಡೆಕೋರರ ಕಾಟವ ತಡೆಯಲು
ಉಪೇಂದ್ರತೀರ್ಥರ ಕಳಿಸಿತು ಕೂಸು ।
ಹಸ್ತಿನಪುರುದಲಿ ಮೈವೆತ್ತಿ ಬಂದು
ನಮಿಸಿದ ಗಂಗೆಯ ಹರಸಿತು ಕೂಸು ॥ ೨೧ ॥

ಹತ್ತು ಮತ್ತೂ ಐದು ಜಟ್ಟಿಶಿಷ್ಯರನು
ಒಟ್ಟು ಜಾಡಿಸಿತು ಗಟ್ಟಿಗ ಕೂಸು ।
ಹರಿಯಾಣತಿ ಬಲದಿಂದಲೆ ಭಾರತ-
ತಾತ್ಪರ್ಯನಿರ್ಣಯ ರಚಿಸಿತು ಕೂಸು ॥ ೨೨ ॥

ಸಪಾದಲಕ್ಷಗ್ರಂಥವನೊಂದೇ
ವಾಕ್ಯದಿ ಖಂಡಿಸಿ ನಕ್ಕಿತು ಕೂಸು ।
ಮದವೂರಿನ ಮದನೇಶ್ವರದಲ್ಲಿ
ದೊರೆ ಜಯಸಿಂಹನ ಹರಸಿತು ಕೂಸು ॥ ೨೩ ॥

ಕಾಲಡಿ ಕೆಂಪು ಉಗುರೂ ಕೆಂಪು
ತಂಪೋ ತಂಪು ಏಳಡಿ ಕೂಸು ।
ಹದ್ದಿನ ಹರಡು ಮೊಣಗಾಲುರುಟು
ಆನೆಯ ಸೊಂಡಿಲೆ ತೊಡೆ ಗಡ ಕೂಸು ॥ ೨೪ ॥

ಕಾವೀ ಸುತ್ತಿದ ಸೊಂಟವೆ ಸೊಗಸು
ಮೂರೂ ಲೋಕಕೆ ಒಡೆಯನು ಕೂಸು ।
ಹೆಗಲಲುಣ್ಣೆಯ ಶಾಲು ಆಜಾನು ತೋಳು
ಚಂದಿರನ ನಾಚಿಸುವ ಚೆಲುಮೊಗದ ಕೂಸು ॥ ೨೫ ॥

ಮೂರು ವಿಕ್ರಮದ ಪೆಜತ್ತಾಯರಿಗೆ
ಪರಮಾನುಗ್ರಹ ಮಾಡಿತು ಕೂಸು ।
ಏಳೆಂಟು ದಿನಗಳ ಹದವಾದ ವಾದದಲಿ
ಪಂಡಿತಾಚಾರ್ಯರನು ಗೆದ್ದಿತು ಕೂಸು ॥ ೨೬ ॥

ಪಂಡಿತರಿಗು ಪಂಡಿತ ಲಿಕುಚಪಂಡಿತರಿಂದ
ತತ್ವಪ್ರದೀಪವ ಬರೆಸಿತು ಕೂಸು ।
ಅವರ ಕೋರಿಕೆಯಂತೆ ತಾನನುವ್ಯಾಖ್ಯಾನ
ನಮಗೆ ಕರುಣಿಸಿತು ಕರುಣಾಳು ಕೂಸು ॥ ೨೭ ॥

ನಾಕು ಶಿಷ್ಯರ ಕೈಲಿ ನಾಕು ಅಧ್ಯಾಯಗಳ
ಒಟ್ಟಿಗೆ ಒರೆದು ಬರೆಸಿತು ಕೂಸು ।
ತನ್ನ ಸೋದರಗೆ ತಪಸಿನಾಗರಗೆ
ಸಂನ್ಯಾಸದೀಕ್ಷೆಯನಿತ್ತಿತು ಕೂಸು ॥ ೨೮ ॥

ಎಲ್ಲರ ಮೀರಿಸಿ ಎತ್ತರಕೇರಿಸಿ
ಪ್ರಣವದ ಗುಟ್ಟನ್ನರುಹಿತು ಕೂಸು ।
ಒಟ್ಟು ಒಂಭತ್ತು ಯತಿಗಳಿಗೆ ಕೂಡಿ
ವೇದಾಂತರಾಜ್ಯವನಿತ್ತಿತು ಕೂಸು ॥ ೨೯ ॥

ಸಂಗೀತ ಹಾಡುತ್ತ ಕೊರಡು ಚಿಗುರಿಸಿತು
ಗಂಧರ್ವರನೂ ನಾಚಿಸಿ ಕೂಸು ।
ನರಹರಿತೀರ್ಥರ ಮುಂದಿರಿಸುತ್ತ
ಯಕ್ಷಗಾನವನು ರಚಿಸಿತು ಕೂಸು ॥ ೩೦ ॥

ಹಸುರು ಕಾಳನ್ನು ಹಿಡಿದು ಜಪಿಸುತ್ತ
ಮೊಳಕೆ ಬರಿಸಿತು ಮಂತ್ರತಜ್ಞ ಕೂಸು ।
ಗ್ರಹಣದಾ ಕತ್ತಲಲಿ ಕಾಲುಗುರ ಬೆಳಕಿಂದ
ಪಾಠ ಮಾಡಿದ ತೇಜಃಪುಂಜ ಕೂಸು ॥ ೩೧ ॥

ಭಾರಿ ಬಂಡೆಯನು ಒಂದೆ ಕೈಲೆತ್ತಿ
ತುಂಗಭದ್ರೆಯ ತಡಿಯಲಿಟ್ಟಿತು ಕೂಸು ।
ಸುರಗಣ ಮೆಚ್ಚಿ ಹೂಮಳೆಗರೆಯಲು
ದಿವ್ಯಪ್ರವಚನ ನೀಡಿತು ಕೂಸು ॥ ೩೨ ॥

ಮಾಘಮಾಸದಾ ನವಮಿಯಂದು ತಾ-
ನೊಬ್ಬನೆ ಬದರಿಗೆ ತೆರಳಿತು ಕೂಸು ।
ಮರೆಯಲಿ ನಮ್ಮ ಹರಸುತ್ತಿರುವ
ಗೋವಿಂದವಿಟ್ಠಲನ ಮೋಕೆಯ ಕೂಸು ॥ ೩೩ ॥

★★★



ಉಡುಪಿಯ ಕೃಷ್ಣಮಂದಿರದಲ್ಲಿ ಪೂಜೆ ಕೊಳ್ಳುವ ಆಚಾರ್ಯಮಧ್ವರು

ಬಲಗೈಯಲ್ಲಿ ಜ್ಞಾನಮುದ್ರೆ; ಎಡಗೈಯಲ್ಲಿ ಅಭಯಮುದ್ರೆ



ಅನಂತೇಶ್ವರದೇವಾಲಯದಲ್ಲಿ ಆಚಾರ್ಯಮಧ್ವರು ಪ್ರವಚನದ ಭಂಗಿಯಲ್ಲಿ



ಆಚಾರ್ಯಮಧ್ವರ ಜನ್ಮಭೂಮಿ ಪಾಜಕದಲ್ಲಿ ಪೂಜೆ ಕೊಳ್ಳುವ ಪಾಜಕದ ಗಿಣಿ:

ಮಧ್ವಮುನಿ

ಪಾಜಕದ ಗಿಣಿ

ಈ ಹಾಡಿನ ಹಿಂದೆ ಒಂದು ರೋಚಕವಾದ ಕಥೆಯಿದೆ–

ನಾಲ್ವತ್ತು ವರ್ಷಗಳಿಗಿಂತಲು ಹಿಂದೆ ಒಂದು ದಿನ. ನನಗೆ ಎಲ್ಲಿಲ್ಲದ ಜ್ವರ. ಮೈಯೆಲ್ಲ ಕಾದಿತ್ತು. ಹೊದ್ದು ಮಲಗಿದ್ದೆ. ಎದ್ದು ಓಡಾಡಲೂ ಆಗದು. ಅಷ್ಟು ನಿತ್ರಾಣ. ಇತ್ತ ನಿದ್ದೆಯೂ ಬಾರದು. ಕಣ್ಮುಚ್ಚಿ ಆಚಾರ್ಯಮಧ್ವರನ್ನು ನೆನೆಯುತ್ತ ತೆಪ್ಪಗೆ ಮಲಗಿದ್ದೆ. ಇದ್ದಕ್ಕಿದ್ದಂತೆ ಒಂದು ಸಾಲು ಹೊಳೆಯಿತು: ಓ ಪಾಜಕದ ಗಿಣಿಯೆ!

ಏನೋ ವಿಚಿತ್ರ ಅನುಭವ. ತಲೆಯೊಳಗೆ ರ್ಝುವ್ಮೆಂದು ಮಿಂಚೊಂದು ಮಿಂಚಿದಂತೆ. ಏನೋ ಹೊಸ ಹುರುಪು ಬಂದಂತೆ. ಎದ್ದು ಕುಳಿತೆ. ಪಕ್ಕದಲ್ಲೆ ಇದ್ದ ಪೆನ್ನನ್ನು ಕೈಗೆತ್ತಿಕೊಂಡೆ. ಹಾಳೆಯಲ್ಲಿ ಬರೆಯ ತೊಡಗಿದೆ. ಅನಾಯಾಸವಾಗಿ ಇಡಿಯ ಹಾಡು ಮೂಡಿಬಂತು. ಆಚಾರ್ಯಮಧ್ವರೇ ನನ್ನಿಂದ ನುಡಿಸಿದ ಆ ಹಾಡು ಇದು–

ಓ ಪಾಜಕದ ಗಿಣಿಯೆ ಮೂಜಗದ ಕಣ್ಮಣಿಯೆ
ಸೋಜಿಗದ ಗನಿಯೆ ಓ ಮಧ್ವ ಮುನಿಯೆ ॥

ಸವಿದಿರುವೆ ಗುರುವೆ ನೀ ದಿವ್ಯ ತತ್ವದ ಹಣ್ಣು
ನಮಗೂ ತಿನಿಸಯ್ಯ ಆ ರಸದ ಗಿಣ್ಣು।
ಏನು ಪುಣ್ಯ ಮಾಡಿತ್ತೋ ಈ ನೆಲದ ಮಣ್ಣು
ಪಾವನವಾಯಿತು ನಿನ್ನ ಕಂಡ ಕಣ್ಣು ॥ ೧ ॥

ಆನಂದತೀರ್ಥಗುರು ನೀನು ಆನಂದಿ
ನಿದ್ದೆಯಿಂದೆಚ್ಚರಿಸೆ ಮದ್ದು ತಂದಿ ।
ಹರಿಯೆ ಪರದೈವತವು ಎಂದೆನುತ ಬಂದಿ
ನಿನ್ನನರಿತವರಿಲ್ಲ ಬಹಳ ಮಂದಿ ॥ ೨ ॥

ದೇವಲೋಕದ ಬೆಳಕ ಭುವಿಗಿಳಿಸಿದವನೇ
ಮುಗಿಲ ಭಾಗ್ಯದ ಬಾಗಿಲನ್ನು ತೆರೆದವನೇ ।
ನೀನೇರಿದೆತ್ತರವ ಕಂಡವರು ಯಾರು?
ನಮಗೂ ತೋರಯ್ಯ ಆ ಬೆಳಕಿನೂರು ॥ ೩ ॥

ರಕ್ಕಸರ ಸೊಕ್ಕನ್ನು ಮುರಿದ ಬಿರುಗಾಳಿ
ಕೌರವರ ಕುಲವನ್ನು ತರಿದ ತಿರುಗಾಳಿ ।
ಕಡಲಿನಲಿ ಹಡಗನ್ನು ಮುಳುಗಿಸಿದ ಗಾಳಿ
ಕಡಲಿಂದ ಕೃಷ್ಣನನು ತಂದ ಗಾಳಿ ॥ ೪ ॥

ಕೈಮುಗಿದು ಬೇಡುವೆನು ಕ್ಷಮೆಯನ್ನು ಕೇಳಿ
ಬೀಜಾಕ್ಷರವ ಬಿತ್ತು ಎದೆಯನ್ನು ಸೀಳಿ ।
ಎಂದು ಬಂದೀತಯ್ಯ ನಿನ್ನ ಸೇವೆಯ ಪಾಳಿ
ತಲೆಯ ಮೇಲಿರಿಸಯ್ಯ ನಿನ್ನ ಪದಧೂಳಿ ॥ ೫ ॥

★★★